بِسْمِ اللہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ
# ಬದರ್
ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ಸಂಚಿಕೆ: 49

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**09 ಡಿಸೆಂಬರ್ 2021, 09 ಫತಹ್ 1400 ತಬ್‌ಲೀಗ್ ಹಿಜರಿ ಶಮ್‌ಸಿ, 04 ಜಮಾದಿ ಉಲ್‌ಅವ್ವಲ್ 1443 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَهُوَ اللّٰهُ فِي السَّمٰوٰتِ وَفِي الْاَرْضِ ؕ
يَعْلَمُ سِرَّكُمْ وَجَهْرَكُمْ
وَيَعْلَمُ مَا تَكْسِبُوْنَ

**(ಅಲ್‌ಅನ್‌ಆಂ : 04)**

**ಅಂದರೆ:** ಅವನೇ ಅಲ್ಲಾಹನು; ಆಕಾಶಗಳಲ್ಲೂ ಭೂಮಿಯಲ್ಲೂ ಇರುವ *ದೇವನು.* ಅವನು ನೀವು ಬಚ್ಚಿಡುವುದನ್ನೂ ಬಹಿರಂಗಪಡಿಸುವುದನ್ನೂ ತಿಳಿಯುತ್ತಾನೆ. ನೀವು ಏನನ್ನು ಸಂಪಾದಿಸುತ್ತೀರೆಂಬುದನ್ನೂ ಅವನು ತಿಳಿಯುತ್ತಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್ರತ್ ರಸೂಲುಲ್ಲಾಹ್(ಸ) ರವರ ತಲ್‌ಬೀಅ ಪದಗಳು

(1549) ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ರವರ ಲಬ್ಬಯೇಕ್ ಹೀಗಿತ್ತು. "ಲಬ್ಬೆಯೇಕ್ ಅಲ್ಲಾಹುಮ್ಮ. ಅಂದರೆ ನಾನು ಹಾಜರಾಗಿದ್ದೇನೆ. ಓ ನನ್ನ ಅಲ್ಲಾಹ್ ನಾನು ಹಾಜರಾಗಿದ್ದೇನೆ. ನಾನು ಹಾಜರಾಗಿದ್ದೇನೆ. ನಿನ್ನ ಹೊರತು ಯಾರೂ ಭಾಗಿದಾರನೂ ಅಲ್ಲ. ನಾನು ಹಾಜರಾಗಿದ್ದೇನೆ. ಎಲ್ಲ ಒಳಿತುಗಳು ಮತ್ತು ಎಲ್ಲ ಅನುಗ್ರಹಗಳು ಭಿನ್ನವಾಗಿವೆ ಮತ್ತು ಸರ್ವಾಧಿಕಾರಿಯೂ ನೀನಾಗಿದೆ. ನಿನ್ನ ಭಾಗಿದಾರನು ಯಾರೂ ಇಲ್ಲ.

(1550) ಹಝ್ರತ್ ಆಯಿಶಾ(ರ) ರಿಂದ ವರದಿಯಿದೆ. ಅವರು ಹೇಳುತ್ತಾರೆ. ನಾನು ಚೆನ್ನಾಗಿ ಅರಿತಿರುವೆನು. ನಬಿ(ಸ) ಯಾವ ರೀತಿ ಲಬ್ಬೆಯೇಕ್ ಹೇಳುತ್ತಿದ್ದರು ಎಂದು. (ಅಂದರೆ) **ಲಬ್ಬೈಕ ಅಲ್ಲಾಹುಮ್ಮ ಲಬ್ಬೈಕ್, ಲಾಶರೀಕ ಲಕ ಲಬ್ಬೈಕ್, ಇನ್ನಲ್ ಹಮ್‌ದ ವನ್ನಿಅ್‌ಮತಲಕ (ಸಹೀಹ್ ಬುಖಾರಿ, ಸಂಪುಟ–3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

**ಮನುಷ್ಯನ ಅಂತರಂಗದಲ್ಲಿ ವಿಶ್ವಾಸ ಸ್ಥಾಪಿತವಾದರೆ ಅವನ ಕರ್ಮಗಳಲ್ಲಿ ಒಂದು ರೀತಿಯ ಸಂತೋಷ ಉಂಟಾಗುತ್ತದೆ. ಅವನ ಆಧ್ಯಾತ್ಮಿಕ ಕಣ್ಣು ತೆರೆಯಲ್ಪಡುತ್ತದೆ. ಅವನು ನಮಾಝ್‌ಅನ್ನು ಅದರ ಅನುಷ್ಠಿಸುವ ರೀತಿಯಲ್ಲೆ ಅನುಷ್ಠಾನಿಸುತ್ತಾನೆ. ಪಾಪಗಳಿಂದ ದೂರವಾಗುತ್ತಾನೆ, ಅಪವಿತ್ರ ಸಭೆಗಳಿಂದ ದ್ವೇಶ ಉಂಟಾಗುತ್ತದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ತಮ್ಮ ವಿಶ್ವಾಸವನ್ನು ಅಳತೆ ಮಾಡಿಕೊಳ್ಳಿರಿ, ಕರ್ಮಗಳು ವಿಶ್ವಾಸದ ಆಭರಣಗಳಾಗಿವೆ. ನಡವಳಿಕೆ ಸರಿಯಿಲ್ಲದಿದ್ದರೆ ವಾಸ್ತವದಲ್ಲಿ ವಿಶ್ವಾಸವು ಇಲ್ಲದಂತೆಯೇ ಸರಿ. ಸತ್ಯವಿಶ್ವಾಸವು ಸುಂದರತೆಯಿಂದ ಕೂಡಿರುತ್ತದೆ. ಒಬ್ಬ ಸೌಂಧರ್ಯವಂತನನ್ನು ಸಾಧಾರಣ ರೀತಿಯಲ್ಲಿ ತೋರಿಸಿದರು ಕೂಡ ಸುಂದರವಾಗಿ ಕಾಣುತ್ತಾನೆ. ಅದೇ ರೀತಿ ಸತ್ಯವಿಶ್ವಾಸಿಗೆ ಕರ್ಮಗಳು ಇನ್ನಷ್ಟು ಸುಂದರಗೊಳಿಸುತ್ತದೆ. ನಡವಳಿಕೆ ಸರಿಯಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಮನುಷ್ಯನ ಅಂತರಂಗದಲ್ಲಿ ವಿಶ್ವಾಸ ಸ್ಥಾಪಿತವಾದರೆ ಕರ್ಮಗಳಲ್ಲಿ ಒಂದು ರೀತಿಯ ಸಂತೋಷ ಉಂಟಾಗುತ್ತದೆ. ಅವನ ಆಧ್ಯಾತ್ಮಿಕ ಕಣ್ಣು ತೆರೆಯಲ್ಪಡುತ್ತದೆ. ಅವನು ನಮಾಝ್ ಅನ್ನು ಅದರ ಅನುಷ್ಠಾನ ರೀತಿಯಲ್ಲಿ ಅನುಷ್ಠಾನಿಸುತ್ತಾನೆ, ಪಾಪಗಳಿಂದ ದೂರವಾಗುತ್ತಾನೆ, ಅಪವಿತ್ರ ಸಭೆಗಳಿಂದ ದ್ವೇಶ ಉಂಟಾಗುತ್ತದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಪ್ರತಾಪ ಮತ್ತು ವಿವೇಕ ವ್ಯಕ್ತಪಡಿಸಲು ಅವನ ಹೃದಯದಲ್ಲಿ ಒಂದು ಉತ್ಸಾಹ ಉಂಟಾಗುತ್ತದೆ. ಅದೇ ವಿಶ್ವಾಸ ಅವನನ್ನು, ಏಸೂ ಮಸೀಹರ ರೀತಿಯಲ್ಲಿ ಶಿಲುಬೆಗೆ ಏರಿಸಲು ತಡೆಯುವುದಿಲ್ಲ. ಅವನು ಅಲ್ಲಾಹನಿಗಾಗಿ, ಹೌದು ಅಲ್ಲಾಹನಿಗಾಗಿ ಮಾತ್ರ ಇಬ್ರಾಹೀಮರ ರೀತಿಯಲ್ಲಿ ಅಗ್ನಿಯಲ್ಲಿ ಬೀಳಲು ರಾಜಿಯಾಗುತ್ತಾನೆ. ಅವನು ತನ್ನ ಸಂತೃಪ್ತಿಯನ್ನು ಅಲ್ಲಾಹನೊಂದಿಗೆ ಜೋಡಿಸಿದಾಗ, ಅಲ್ಲಾಹನು ಎಲ್ಲರ ಹೃದಯಗಳ ಅಂತರಂಗ ಬಲ್ಲವನಾಗಿದ್ದಾನೆ, ಅವನ ರಕ್ಷಕನಾಗುತ್ತಾನೆ. ಅವನು ಶಿಲುಬೆಯಿಂದಲೂ ಜೀವಂತ ಇಳಿಸಿಕೊಳ್ಳುತ್ತಾನೆ. ಮತ್ತು ಅಗ್ನಿಯಿಂದ ಯಥಾವತ್ತಾಗಿ ರಕ್ಷಿಸುತ್ತಾನೆ. ಈ ಪವಾಡಗಳನ್ನು ಅಲ್ಲಾಹನ ಪೂರ್ಣ ವಿಶ್ವಾಸ ಹೊಂದಿದವರಿಗೆ ಮಾತ್ರ ಕಾಣಲು ಸಾಧ್ಯ.

ಅಂದಹಾಗೆ ಅಬೂಬಕರ್‌ರವರ ಸತ್ಯಸಂಧತೆ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ದಿಗ್ಬಂಧನ ಹಾಕಿದಾಗ ಪ್ರಕಟವಾಯಿತು. ಕೆಲವರ ಅಭಿಪ್ರಾಯದಲ್ಲಿ ಅದು ಬಂಧನವಾಗಿತ್ತು. ಆದರೆ ಅದು ವಾಸ್ತವವಾಗಿ ಅವರ ಹತ್ಯೆಯಾಗಿತ್ತು. ಅಂತಹ ಪರಿಸ್ಥಿತಿಯಲ್ಲಿ ಹಝ್ರತ್ ಅಬೂಬಕರ್ ತಮ್ಮ ಸತ್ಯಸಂಧತೆ ಹಾಗೂ ನಿಷ್ಠೆಯ ಮಾದರಿ ತೋರಿಸಿದರು. ಅದು ಶಾಶ್ವತವಾಗಿ ಮಾದರಿಯಾಗಿರುವುದು. ಆ ಆಪತ್ತಿನ ಸಮಯದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಆಯ್ಕೆ ಹಝ್ರತ್ ಸಿದ್ಧೀಖ್ ಆಗಿರುವುದು. ಅವರ ಮಹಾನತೆ ಮತ್ತು ಉನ್ನತ ಮಟ್ಟದ ನಿಷ್ಠೆಗೆ ಸಾಕ್ಷಿಯಾಗಿದೆ. ನೋಡಿರಿ. ವ್ಯಾಸರಾಯ ಹಿಂದ್ ವ್ಯಕ್ತಿಯೊಬ್ಬನನ್ನು ಆಯ್ಕೆ ಮಾಡಿಕೊಂಡರೆ, ಅವನ ಆಯ್ಕೆ ಉತ್ತಮವಾಗಿರುವುದೋ ಅಥವಾ ಒಬ್ಬ ಚೌಕೀದಾರನದ? ವ್ಯಾಸರಾಯನ ಆಯ್ಕೆಯೇ ಉತ್ತಮವಾಗಿರುವುದು. ಏಕೆಂದರೆ ಯಾವ ಸ್ಥಿತಿಯಲ್ಲಿ ಸರಕಾರದ ವತಿಯಿಂದ ಅವನು ಆಯ್ಕೆಗೊಂಡನೋ, ಅವನ ನಿಷ್ಠೆ, ಬುದ್ಧಿವಂತಿಕೆ ಮತ್ತು ಪ್ರೌಢತೆಯ ಮೇಲೆ ಸರಕಾರ ಭರವಸೆ ಹೊಂದಿದೆ ಎಂದು ಪರಿಗಣಿಸಬಹುದಾಗಿದೆ. ಆಗ ಸರಕಾರದ ಚುಕ್ಕಾಣಿ ಅವನ ಕೈಗೆ ಕೊಡಲಾಗುತ್ತದೆ. ಮತ್ತೆ ಅವನನ್ನು ಕಡೆಗಾಣಿಸಲಿಕ್ಕೆ ಚೌಕೀದಾರನ ಆಯ್ಕೆ ಸಿಂಧು ಎನ್ನುವುದು ಅನುಚಿತವಾಗಿರುತ್ತದೆ. (ಮಲ್ಫೂಝಾತ್ ಸಂಪುಟ–1, ಪುಟ–340 ಮುದ್ರಣ 2018 ಖಾದಿಯಾನ್)

**ವಾಸ್ತವವೇನೆಂದರೆ, ಯಾವ ರೀತಿ ಮನುಷ್ಯರಲ್ಲಿ ಯಾರು ಸಹ ಹಝ್ರತ್ ರಸೂಲುಲ್ಲಾಹ್(ಸ) ರವರ ಸಂದೇಶದಿಂದ ಹೊರತಾಗಿಲ್ಲವೋ. ಅದೇ ರೀತಿ ಮನುಷ್ಯರ ಹೊರತು ಯಾವ ಸೃಷ್ಟಿಯೂ ಸತ್ಯವಿಶ್ವಾಸ ಹೊಂದಲು ಬಾಧ್ಯಸ್ಥರಲ್ಲ, ಪವಿತ್ರ ಖುರ್‌ಆನ್‌ನಲ್ಲಿ ಯಾವ ಜಿನ್ನ್ ಮೂಮಿನ್‌ಗಳ ವಿವರವಿದೆಯೋ ಅವರು ಮನುಷ್ಯರಾಗಿದ್ದರೇ ಹೊರತು ಯಾವ ಬೇರೆ ಸೃಷ್ಟಿಯಾಗಿರಲಿಲ್ಲ.**

ಸೂರಃ ಅಲ್–ಜಿನ್ನ್ ಮತ್ತು ಸೂರಃ ಅಹಖಾಫ್‌ದಿಂದ ತಿಳಿದುಬರುವುದೇನೆಂದರೆ ಜಿನ್ನರ ಒಂದು ವರ್ಗ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದಿತ್ತು. ಹದೀಸುಗಳಿಂದಲೂ ತಿಳಿದುಬರುತ್ತದೆ. ಜಿನ್ನರ ಒಂದು ವರ್ಗ ರಸೂಲುಲ್ಲಾಹ್(ಸ) ರನ್ನು ಭೇಟಿ ಮಾಡಲು ಬಂದಿತ್ತು. ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದವರು ಮನುಷ್ಯರೇ ಆಗಿದ್ದರು. ಇದರ ಬಗ್ಗೆ ಪುರಾವೆಗಳನ್ನು ಹಿಂದಿನ ಸಂಚಿಕೆಯಲ್ಲಿ ವಿವರಿಸಲಾಗಿದೆ.

**ಆರನೇಯ ಪುರಾವೆ:** ಮನುಷ್ಯರೇ ಮೂಮಿನ್ ಜಿನ್ನಾಗಿದ್ದರು ಎಂಬುದಕ್ಕೆ ಆರನೇ ಸಾಕ್ಷಿ, ಮುಸ್ತದ್ ಅಹ್ಮದ್ ಬಿನ್ ಹಂಬಲ್‌ನಲ್ಲಿ ಬರುತ್ತದೆ. ಖಾಲಾ (ಸಂಪುಟ 2 ಪುಟ 222) ಅಂದರೆ ರಸೂಲುಲ್ಲಾಹ್(ಸ) ತಹಜ್ಜುದ್ ನಮಾಝ್ ನಿರ್ವಹಿಸಿದ ನಂತರ, ಅವರ ಹಿಂದೆ ಶಾಮೀಲಾಗಿದ್ದ ಕಾವಲುಗಾರನೊಬ್ಬನಿಗೆ ಹೇಳಿದರು. ಇಂದು ನನಗೆ ಐದು ವಿಶಿಷ್ಠತೆಗಳನ್ನು ನೀಡಲಾಗಿದೆ. ಈ ಹಿಂದೆ ಯಾರಿಗೂ ಅದು ನೀಡಲಾಗಿರಲಿಲ್ಲ.

***(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)***

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

**ಯಾರಾದರೂ ಯೇಸುವಿನ ದೃಷ್ಟಾಂತಗಳು ಸಾಕ್ಷ್ಯಗಳು, ನನ್ನ ದೃಷ್ಟಾಂತಗಳಿಗಿಂತ ಹೆಚ್ಚಾಗಿದ್ದವು ಎಂದರೆ, ನಾನು ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ನೀಡುವೆನು.**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನವು ನಾವು ಅವರ ಗ್ರಂಥ "ಸಿರಜ್ ಮುನೀರ್" ರೂಹಾನಿ ಖಝಾಯಿನ್ ಸಂಪುಟ 12 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಕ್ರೈಸ್ತರು ಮೂರು ದೇವರೆಂದು ನಂಬುತ್ತಾರೆ. ಪಿತ, ಸುತ ಅಂದರೆ ಮರಿಯಮನ ಪುತ್ರ ಈಸ, ಮತ್ತು ಪವಿತ್ರ ಆತ್ಮ (ರೂಹುಲ್ ಖುದೂಸ್). ಅಲ್ಲಾಹನು ಕ್ರೈಸ್ತರ ಈ ವಿಶ್ವಾಸದ ಮೇಲೆ ತನ್ನ ಕೋಪವನ್ನು ವ್ಯಕ್ತಪಡಿಸಿದ್ದಾನೆ. ಅದು ತುಂಬಾ ಪ್ರಭಾವ ಬೀರುವಂತಹ ಕೋಪವಾಗಿದೆ. ಅಲ್ಲಾಹನು ಸೂರಃ ಮರಿಯಮ್‌ನಲ್ಲಿ ಹೀಗೆ ಹೇಳಿದನು. ಆಕಾಶಗಳು ಸ್ಫೋಟಗೊಳ್ಳಬಹುದು. ಏಕೆಂದರೆ ದಯಾವಂತನಾದ ದೇವನಿಗೆ ಒಬ್ಬ ಪುತ್ರನಿದ್ದಾನೆಂದು ಅವರು ವಾದಿಸುತ್ತಾರೆ. ತಾನೊಬ್ಬ ಪುತ್ರನನ್ನು ಹೊಂದುವುದು ದಯಾವಂತನಾದ ದೇವನಿಗೆ ಎಂದಿಗೂ ಭೂಷಣವಲ್ಲ.

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಯೇಸುವಿನ ಪವಾಡಗಳಾಗಲಿ, ದೃಷ್ಟಾಂತಗಳಾಗಲಿ ದೇವತ್ವ ಸಾಬೀತುಗೊಳ್ಳುವಂತಹದ್ದಲ್ಲ, ಯೇಸುವಿನ ಪವಾಡಗಳು, ದೃಷ್ಟಾಂತಗಳಿಗಿಂತ ಹೆಚ್ಚಿನ ಪವಾಡಗಳು ಹಾಗೂ ದೃಷ್ಟಾಂತಗಳನ್ನು ಅಲ್ಲಾಹನು ನನಗೆ ನೀಡಿರುವನು. ಆದುದರಿಂದ ಯೇಸುವಿನ ಪವಾಡಗಳಿಂದ ದೇವತ್ವ ಸಾಬೀತುಗೊಳಿಸುವುದು ಒಂದು ನಿರರ್ಥಕ ಪ್ರಯೋಗವಾಗಿದೆ. ಅವರು ಈ ಬಗ್ಗೆ ಅತ್ಯಂತ ವೈಭವಪೂರಿತ ಬಹುಮಾನದ ಪಂಥಾಹ್ವಾನ ನೀಡಿದರು. ಯಾರಾದರೂ ಕ್ರೈಸ್ತ ಬಾಂಧವರು ಯೇಸುವಿನ ಪವಾಡಗಳನ್ನು ದೇವತ್ವಕ್ಕೆ ಸಮಾನ ಎಂದು ಭಾವಿಸುವವರು. ಯೇಸುವಿನ ದೃಷ್ಟಾಂತಗಳು ನನ್ನ ದೃಷ್ಟಾಂತಗಳಿಗಿಂತ ಅದ್ವಿತೀಯವಾಗಿದೆ, ಹಾಗೂ ಪವಾಡ ಸಾಕ್ಷ್ಯಗಳು ಅಧಿಕವಾಗಿವೆ ಎಂದು ಸಾಬೀತು ಮಾಡಿ ತೋರಿಸಿದರೆ ನಾನು ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ನೀಡುವೆನು. ಈ ಬಹುಮಾನದ ಪಂಥಾಹ್ವಾನದ ವಿವರ ನಾವು ಹಿಂದಿನ ಸಂಚಿಕೆಯಲ್ಲಿ ನೀಡಿರುತ್ತೇವೆ. ಅದರ ಜೊತೆಯಲ್ಲಿ ನಾವು ಹಝ್ರತ್ ಈಸಾ(ಅ) ರವರ ದೇವತ್ವವನ್ನು ನಿಷೇದಿಸುತ್ತಾ ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ರೋಚಕ ಮತ್ತು ವಿಶ್ವಾಸವರ್ಧಕ ವಿವರಗಳನ್ನು ಪ್ರಸ್ತುತಪಡಿಸಿದ್ದೇವೆ. ಈ ಸಂಚಿಕೆಯಲ್ಲಿ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಸ್ಥಾನಮಾನ, ಅವರ ಪವಾಡಗಳು ಮತ್ತು ದೃಷ್ಟಾಂತಗಳು ಹಾಗೂ ಅವರ ಪವಿತ್ರ ನಡವಳಿಕೆಯ ಎದುರಿನಲ್ಲಿ ಸಯ್ಯಿದ್‌ನಾ ಹಝ್ರತ್ ಮಸೀಹ್ ನಾಸಿರಿ(ಅ) ರವರ ಸ್ಥಾನಮಾನ ಅವರ ಪವಾಡಗಳು ದೃಷ್ಟಾಂತಗಳು ಮತ್ತು ಅವರ ಪವಿತ್ರ ನಡವಳಿಕೆಯ ಒಂದಿಷ್ಟು ವಿವರ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳೊಂದಿಗೆ ಮಾಡುವೆವು.

### ಹಝ್ರತ್ ಮಸೀಹ್(ಅ) ರವರ ಪವಾಡಗಳು:

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಹಝ್ರತ್ ಈಸಾ ಮಸೀಹ್(ಅ) ರವರ ಪವಾಡಗಳು ಇಂಜೀಲಿನಲ್ಲಿ ವಿವರಿಸಲಾಗಿದ್ದು ಅವು ಕಥೆ, ಕಾದಂಬರಿ ರೀತಿಯಲ್ಲಿದ್ದು, ಅದರಲ್ಲಿ ಹಲವು ಏರುಪೇರು ಮತ್ತು ಅತಿಶಯೋಕ್ತಿಯಿದ್ದುದ್ದರಿಂದ ಸಂಶಯಕ್ಕೆ ಎಡೆ ಮಾಡಿಕೊಡುವಂತಹದ್ದಾಗಿದೆ. ಅದನ್ನು ಸಾಕ್ಷ್ಯ ರೂಪದಲ್ಲಿ ತೋರಿಸುವುದು ಅತ್ಯಂತ ಕಠಿಣ ಕೆಲಸವಾಗಿದೆ. ಹಝ್ರತ್ ಮಸೀಹ್‌ರ ಕುರಿತು ಇಂಜೀಲಿನಲ್ಲಿ ತೋರಿಸಲಾದಂತೆ, ಅಂಗವಿಕಲರನ್ನು, ಕುಂಟರನ್ನು, ಅಂಧರನ್ನು ಹಾಗೂ ಇನ್ನಿತರ ರೋಗಿಗಳನ್ನು ಅವರು ಗುಣಪಡಿಸುತ್ತಿದ್ದರು ಎಂಬುದನ್ನು ಸರಿಯೆಂದು ನಂಬಿದ್ದರು. ಇವೆಲ್ಲ ವಿವರಗಳು ನಿಸ್ಸಂಶಯವಾಗಿಯೂ ಆಡಂಬರವೇ ಆಗಿದೆಯೇ ಹೊರತು ಒಳರ್ಥ ಏನೂ ಇಲ್ಲ. ಆಗಲೂ ಈ ವಿಷಯಗಳಿಂದ ಹಝ್ರತ್ ಮಸೀಹ್‌ರ ಯಾವದೇ ಗುಣ ಸಾಬೀತಾಗುವುದು ಇಲ್ಲ. ಮೊದಲನೆಯದಾಗಿ ಹೇಳುವುದಾದರೆ, ಆ ದಿನಗಳಲ್ಲಿ ಅಲ್ಲಿ ಒಂದು ಕೆರೆಯಿತ್ತು. ಅದರಲ್ಲಿ ಒಂದು ವಿಶಿಷ್ಠ ಸಮಯದಲ್ಲಿ ಮುಳುಗಿ ಬಂದರೆ ಎಲ್ಲ ತರಹದ ರೋಗಗಳು ತಕ್ಷಣದಿಂದ ಗುಣವಾಗುತ್ತಿದ್ದವು. ಇದರ ವಿವರ ಇಂಜೀಲ್‌ನಲ್ಲಿ ಒಳಗೊಂಡಿದೆ. ಅದಲ್ಲದೇ ದೀರ್ಘಕಾಲದ ಸಂಶೋಧನೆಗಳಿಂದ ಸಾಬೀತುಗೊಂಡ ವಿಷಯವಾಗಿದೆ. ಇಂತಹ ರೋಗಗಳನ್ನು ಗುಣಪಡಿಸುವ ಒಂದು ವಿದ್ಯೆ ಇದೆ. ಈಗಲೂ ಅದನ್ನು ಕಲಿಯಲು ಹಲವರು ಹಂಬಲಿಸುತ್ತಾರೆ. ಆ ವಿದ್ಯೆಗೂ ಪ್ರವಾದಿತ್ವಕ್ಕೂ ಸಂಬಂಧವೇನು ಇಲ್ಲ. ಅಷ್ಟೇ ಅಲ್ಲ, ಸಜ್ಜನನಾಗಬೇಕೆಂದೇನಿಲ್ಲ. ಪುರಾತನ ಕಾಲದಿಂದ ಈ ವಿದ್ಯೆ ಪ್ರಚಲಿತವಿದೆ. ಮುಸಲ್ಮಾನರಲ್ಲೂ ಕೆಲವರು ಈ ವಿಷಯದಲ್ಲಿ ತಜ್ಞರಾಗಿದ್ದಾರೆ. (ಏಕ್ ಈಸಾಯಿ ಕೆ ತೀನ್ ಸವಾಲೋಂ ಕೇ ಜವಾಬಾತ್, ರೂಹಾನಿ ಖಝಾಈನ್, ಸಂಪುಟ–4, ಪುಟ–450)

### ಮರಿಯಮನ ಪುತ್ರಗಿಂತ ಹೆಚ್ಚು ದೈವಿಕ ನೆರವು

ನನ್ನೊಂದಿಗೆ ಇಲ್ಲ ಎಂದಾದರೆ ನಾನು ಸುಳ್ಳುಗಾರ. ಈ ಜನರು ಅನಾವಶ್ಯಕವಾಗಿ ತನ್ನ ಮನಸ್ಸಿನಿಂದ ದೇವತೆಗಾಗಿ ಪುತ್ರನನ್ನು ಮತ್ತು ಪುತ್ರಿಯರನ್ನು ಸೃಷ್ಟಿಸಿಕೊಂಡಿದ್ದಾರೆ. ಮರಿಯಮನ ಪುತ್ರ ಒಬ್ಬ ದುರ್ಬಲ ಮನುಷ್ಯನೆಂದು ಅರಿಯುವುದಿಲ್ಲ. ದೇವನು ಬಯಸಿದರೆ ಮರಿಯಮನ ಪುತ್ರನ ಹಾಗೆ ಇನ್ನೊಬ್ಬನನ್ನು ಸೃಷ್ಟಿಸಬಹುದಾಗಿದೆ ಅಥವಾ ಅವರಿಗಿಂತಲೂ ಉತ್ತಮನಾದರು ಸರಿ. ಹಾಗೆಯೇ ಅವನು ಮಾಡಿತೋರಿಸಿದ್ದಾನೆ. ಆದರೆ ಆ ದೇವನು ಏಕನು. ಅವನಿಗೆ ಯಾರೂ ಸಹ ಭಾಗಿದಾರರಿಲ್ಲ. ಅವನ ಜನನ ಮತ್ತು ಮರಣದಿಂದ ಮುಕ್ತನು. ಅವನಿಗೆ ಸರಿಸಾಟಿ ಯಾರೂ ಇಲ್ಲ. ಕ್ರೈಸ್ತರು ಹುಯಿಲೆಬ್ಬಿಸಿದ್ದರು. ಮಸೀಹನು ತನ್ನ ಇರುವಿಕೆ ಹಾಗೂ ಪ್ರತಾಪದಿಂದಾಗಿ ಅವನು ಎಲ್ಲರಿಗಿಂತ ಹೊರತಾಗಿದ್ದಾನೆಂದು, ಈಗ ಅಲ್ಲಾಹನು ತೋರಿಸುತ್ತಿದ್ದಾನೆ. ನಾನು ಅವನ ದ್ವಿತೀಯ ರೂಪ ಸೃಷ್ಟಿಸುವೆನು. ಅವನು ಉತ್ತಮನಾಗಿರುವನು, ಅವನು ಗುಲಾಂ ಅಹ್ಮದ್ ಆಗಿದ್ದಾನೆ. ಅಂದರೆ ಅಹ್ಮದನ ಗುಲಾಮ.

ಝಿಂದಗಿ ಬಖ್ಷ್ ಜಾಮೆ ಅಹ್ಮದ್ ಹೈ; ಕ್ಯಾ ಪ್ಯಾರಾ ಯೆ ನಾಮ್ ಅಹ್ಮದ್ ಹೈ

ಲಾಖ್ ಹೋಂ ಅಂಬಿಯಾ ಮಗರ್ ಬಖುದಾ; ಸಬ್ ಸೆ ಬಡ್‌ಕರ್ ಮಖಾಮೆ ಅಹ್ಮದ್ ಹೈ

ಬಾಗ್ ಅಹ್ಮದ್ ಸೆ ಹಮ್ ನೆ ಫಲ್ ಖಾಯಾ ಹೈ; ಮೇರಾ ಬುಸ್ತಾನ್ ಕಲಾಮೆ ಅಹ್ಮದ್ ಹೈ

ಇಬ್ನೆ ಮರಿಯಮ್ ಕೆ ಝಿಕರ್ ಕೋ ಛೋಡೊ; ಉಸ್ ಸೆ ಬೆಹ್ತರ್ ಗುಲಾಮೆ ಅಹ್ಮದ್ ಹೈ

(ಅಹ್ಮದ್ ನಾಮವು ಜೀವ ಪ್ರಧಾನವಾಗಿದೆ. ಅದು ಎಷ್ಟು ಪ್ರಿಯ ನಾಮವಾಗಿದೆ. ಲಕ್ಷಾಂತರ ಪ್ರಾವದಿಗಳು ಬಂದಿರಬಹುದು. ಆದರೆ, ಎಲ್ಲರಿಗಿಂತ ಶ್ರೇಷ್ಠ ಸ್ಥಾನ ಅಹ್ಮದಿನದ್ದಾಗಿದೆ)

ಇದೇನು ಕವಿಗಳ ಮಾತಲ್ಲ. ಬದಲು ವಾಸ್ತವವಾಗಿದೆ. ಅನುಭವದ ಮೇರೆಗೆ ಅಲ್ಲಾಹನ ನೆರವು ಮರಿಯಮನ ಪುತ್ರಗಿಂತ ನನ್ನೊಡನೆ ಇಲ್ಲದಿದ್ದರೆ ನಾನು ಸುಳ್ಳುಗಾರನೇ ಸರಿ. (ದಾಫಿಉಲ್ ಬಲಾ, ರೂಹಾನಿ ಖಝಾಈನ್, ಸಂಪುಟ–18, ಪುಟ–240)

### ಕ್ರೈಸ್ತರ ಮಸೀಹನು ಎಂತಹ ದೇವನಾಗಿದ್ದಾನೆ. ಅವನು ಅಹ್ಮದನ ಗುಲಾಮನನ್ನು ಸಹ ಎದುರಿಸಲು ಆಗದು.

ನೀವು ದಿಟವಾಗಿಯೂ ಅರಿತುಕೊಳ್ಳಿರಿ. ಈ ಮಸೀಹನ ಹೊರತು ಯಾರೂ ಸಹ ಮುಕ್ತಿದಾಯಕನೂ ಅಲ್ಲ, ಹಝ್ರತ್ ರಸೂಲುಲ್ಲಾಹ್(ಸ) ಮತ್ತು ಈ ಮುಕ್ತಿದಾತ ಬೇರೆ ಬೇರೆ ಅಲ್ಲ. ಬದಲು ಅವರ ಮುಕ್ತಿಯೇ ವಾಸ್ತವದಲ್ಲಿ ನನ್ನ ಮುಕ್ತಿಯಾಗಿದೆ. ಓ ಕ್ರೈಸ್ತ ಮಿಷನರಿಯರೇ! ಈಗ ರಬ್ಬುನಲ್ ಮಸೀಹ್ ಎನ್ನಬೇಡಿರಿ. ಮತ್ತು ನೋಡಿರಿ. ನಿಮ್ಮಲ್ಲಿಯೇ ಒಬ್ಬನಿದ್ದಾನೆ. ಅವನು ಆ ಮಸೀಹನಿಗಿಂತ ಮಿಗಿಲಾಗಿದ್ದಾನೆ ಮತ್ತು ಓ ಶಿಯಾ ಸಮುದಾಯವೆ, ಹುಸೇನ್ ನಿಮ್ಮ ಮುಕ್ತಿದಾಯಕರು ಎಂದು ತಕರಾರು ಮಾಡಬೇಡಿರಿ. ಏಕೆಂದರೆ ನಾನು ಸತ್ಯವಾಗಿ ಹೇಳುತ್ತೇನೆ. ಇಂದು ನಿಮ್ಮಲ್ಲಿ ಒಬ್ಬನಿದ್ದಾನೆ. ಆ ಹುಸೇನಿಗಿಂತ ಮಿಗಿಲಾಗಿದ್ದಾನೆ. ನಾನು ಈ ಮಾತುಗಳನ್ನು ತನ್ನ ಕಡೆಯಿಂದ ಹೇಳುವನಾದರೆ, ನಾನು ಸುಳ್ಳುಗಾರನು ನಾನು ನನ್ನ ಜೊತೆಯಲ್ಲಿ ಅಲ್ಲಾಹನ ಸಾಕ್ಷಿಯಿರಿಸಿಕೊಂಡಿದ್ದೇನೆ. ಅಂದಹಾಗೆ ನೀವು ಅಲ್ಲಾಹನೊಂದಿಗೆ ಸೆಣಸಾಡಬೇಡಿ. ನಿಜವಾದ ಮುಕ್ತಿದಾಯಕನು ನಾನಾಗಿದ್ದೇನೆ. ನಾನು ಆ ಸಜ್ಜನರ ನೆರಳಾಗಿದ್ದೇನೆ ಮತ್ತು ಅವರ ಸಾದೃಶ್ಯನಾಗಿದ್ದೇನೆ. ಈ ಕಾಲದ ಅಂಧರು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರನ್ನು ಸ್ವೀಕರಿಸಲಿಲ್ಲ ಮತ್ತು ಅವರನ್ನು ಅಪಮಾನಿಸಿರುವನು. ಆದುದರಿಂದ ಅಲ್ಲಾಹನು ಈ ಸಮಯ ಒಂದೇ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಮಸೀಹ್ ಮೌಊದ್‌ರ(ಅ) ದೌತ್ಯವನ್ನು ಹಾಗೂ ಧರ್ಮಪ್ರಚಾರದ ಕೆಲಸವನ್ನು ಪರಿಪೂರ್ಣಗೊಳಿಸಬೇಕು ಮತ್ತು ಹಝ್ರತ್ ಪೈಗಂಬರರ(ಸ) ಧ್ವಜವನ್ನು ಲೋಕದಲ್ಲಿ ನಾಟಬೇಕು ಎಂಬ ಯೋಚನೆಯೊಂದಿಗೆ ಅಹ್ಮದಿಯರು ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ**

**ತಹ್ರೀಕ್ ಜದೀದಿನ 87ನೇ ವರ್ಷದ ಮುಕ್ತಾಯ ಮತ್ತು 88ನೇ ವರ್ಷ ಶುರುವಾಗಿದೆ ಅದರ ಘೋಷಣೆ**

**ಅಲ್ಲಾಹನ ಅನುಗ್ರಹದಿಂದ ತಹ್ರೀಕ್ ಜದೀದಿನ ಸಾಂಪತ್ತಿಕ ವ್ಯವಸ್ಥೆಯಲ್ಲಿ, 15.3 ಮಿಲಿಯನ್ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿದೆ. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 52 ಸಾವಿರ ಪೌಂಡ್‌ನಷ್ಟು ಅಧಿಕವಿದೆ.**

**ಸರ್ವಶಕ್ತ ಅಲ್ಲಾಹನ ಅನುಗ್ರಹದಿಂದ, ಜಮಾಅತ್ ತನ್ನ ಸೀಮಿತ ಸಂಪನ್ಮೂಲದಿಂದ ತಮ್ಮ ಕೆಲಸ ಕಾರ್ಯಗಳನ್ನು ಪ್ರಾರಂಭಿಸುತ್ತದೆ, ಅದರಲ್ಲಿ ಅಲ್ಲಾಹನು ತನ್ನ ಅನುಗ್ರಹವನ್ನು ಎಂತಹ ಮಟ್ಟದಲ್ಲಿ ಸುರಿಸುತ್ತಾನೆ ಎಂದರೆ, ಬಹುಶಃ ಅವರು ಈ ಕೆಲಸದಲ್ಲಿ ಲಕ್ಷಾಂತರ ಪೌಂಡ್ಗಳನ್ನು ಖರ್ಚು ಮಾಡುತ್ತಿದ್ದಾರೆ ಎಂದು ವೀಕ್ಷಕರು ಭಾವಿಸುತ್ತಾರೆ ಆದರೆ ಇದು ಬಡವರ ಹಣ ಎಂದು ಅವರಿಗೆ ತಿಳಿದಿಲ್ಲ. ಅವರು ಸರ್ವಶಕ್ತನಾದ ಅಲ್ಲಾಹನಿಂದ ಆಶೀರ್ವದಿಸಲ್ಪಟ್ಟಿದ್ದಾರೆ ಮತ್ತು ಇದರ ಪರಿಣಾಮವಾಗಿ ನಮ್ಮ ಸಣ್ಣ ಕಾರ್ಯಗಳು ದೊಡ್ಡದಾಗಿ ಕಾಣುತ್ತವೆ.**

**ಸರ್ವಶಕ್ತನಾದ ಅಲ್ಲಾಹನು ಲೌಕಿಕ ಪ್ರಯೋಜನಗಳನ್ನು ದಯಪಾಲಿಸಿದಾಗ, ಅಹ್ಮದಿಯರು ಇದು ನನ್ನ ಯಾವುದೇ ಪರಿಪೂರ್ಣತೆಯ ಫಲಿತಾಂಸವಲ್ಲ ಬದಲಿಗೆ ಇದು ತ್ಯಾಗದ ಫಲಿತಾಂಶ ಎಂದು ಭಾವಿಸುತ್ತಾನೆ. ಇದು ಓರ್ವ ಅಹ್ಮದಿಯ ಯೋಚನೆಯಾಗಿರುತ್ತದೆ ಬೇರೆ ಯಾರೂ ಹೀಗೆ ಯೋಚಿಸಲು ಸಾಧ್ಯವಿಲ್ಲ.**

**ಹೊಸ ಅಹ್ಮದೀಯರು ಅಥವಾ ಹಳೆಯವರು, ಜಮಾಅತ್ ಅಹ್ಮದಿಯಾ ಹಣವನ್ನು ಹೇಗೆ ಖರ್ಚು ಮಾಡುತ್ತಾರೆ ಮತ್ತು ಎಲ್ಲಿ ಖರ್ಚು ಮಾಡುತ್ತಾರೆ ಎಂದು ಕೇಳಿದಾಗ ಅದು ವಿಶೇಷ ಪರಿಣಾಮವನ್ನು ಬೀರುತ್ತದೆ. ಈ ಬಗ್ಗೆ ಕಡಿಮೆ ಗಮನ ಹರಿಸುವ ಜಮಾಅತ್‌ಗಳು ಇದರತ್ತ ಗಮನ ಹರಿಸಿರಿ, ಇದರ ಮೂಲ ಉದ್ದೇಶ ಮತ್ತು ಮಹತ್ವವನ್ನು ತಿಳಿಸಿದರೆ ಅವರು ತಮ್ಮ ಚಂದಗಳನ್ನು ಹೆಚ್ಚಿಸಬಹುದು.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–11–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಅಲ್ಲಾಹನು ಸತ್ಯವಿಶ್ವಾಸಿಗಳ ವೈಶಿಷ್ಟ್ಯಗಳನ್ನು ಹೇಳಿರುವುದರಲ್ಲಿ ಒಂದೇನೆಂದರೆ, ಅವರು ತಮ್ಮ ಪರಿಶುದ್ಧ ಧನದಿಂದ ಅಲ್ಲಾಹನ ಸಂಪ್ರೀತಿಗಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ಪವಿತ್ರ ಖುರ್‌ಆನಿನಲ್ಲಿ ಹಣವನ್ನು ಖರ್ಚುಮಾಡುವುದರ ಬಗ್ಗೆ ಪ್ರಸ್ತಾಪಿಸುವಾಗ, ಸತ್ಯವಿಶ್ವಾಸಿಗಳು ಸಂಪತ್ತನ್ನು ಖರ್ಚು ಮಾಡುತ್ತಾರೆ ಎಂದು ಹೇಳಿದ್ದಾನೆ. ಕೆಲವಡೆ ದಾನಗಳನ್ನು ಮಾಡುವ ಕುರಿತು ಹೇಳಿದ್ದಾನೆ, ಕೆಲವಡೆ ಝಕಾತ್ ನೀಡುವುದರ ಬಗ್ಗೆ ಹೇಳಿದ್ದಾನೆ. ಅಲ್ಲಾಹನ ಮಾರ್ಗದಲ್ಲಿ ತಮ್ಮ ಧನವನ್ನು ಖರ್ಚು ಮಾಡುವವರಿಗೆ, ಅವರು ಎಲ್ಲಿ ಖರ್ಚು ಮಾಡಬೇಕೆಂದೂ ಅಲ್ಲಾಹನು ತಿಳಿಸಿಕೊಟ್ಟಿದ್ದಾನೆ. ದೈವಿಕ ಜಮಾಅತುಗಳ ರೀತಿಯಂತೆ, ಅವರು ತಮ್ಮ ಸಂಪತ್ತನ್ನು ಪರಿಶುದ್ಧಗೊಳಿಸಲಿಕ್ಕಾಗಿ, ಅಲ್ಲಾಹನ ಅನುಗ್ರಹಗಳನ್ನು ಗಳಿಸಲಿಕ್ಕಾಗಿ, ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ.

ನಮ್ಮ ಜಮಾಅತಿನಲ್ಲೂ ಇದೇ ರೀತಿಯಲ್ಲಿ ಸಾಂಪತ್ತಿಕ ತ್ಯಾಗಗಳ ಪರಂಪರೆ ಜಾರಿಯಲ್ಲಿದೆ. ಇದು ಅಲ್ಲಾಹನ ಆಜ್ಞೆಯಾಗಿದೆ ಎಂದು ಜಮಾಅತಿನ ಸದಸ್ಯರಿಗೂ ಗೊತ್ತಿದೆ. ಅವರು ಮಾಡುವ ತ್ಯಾಗಗಳನ್ನು ಹೇಗೆ ಖರ್ಚು ಮಾಡಲಾಗುತ್ತದೆ ಎಂದೂ ಅವರಿಗೆ ಗೊತ್ತಿದೆ. ಹಝ್ರತ್ ಮಸೀಹ್ ಮೌಊದ್(ಅ) ತಂದಿರುವ ಮಿಶನ್, ಎಂದರೆ ಅಲ್ಲಾಹನ ಏಕತೆಯನ್ನು ಲೋಕದಲ್ಲಿ ಸ್ಥಾಪಿಸಬೇಕು ಮತ್ತು ಹಝ್ರತ್ ಪೈಗಂಬರರ(ಸ) ಧ್ವಜವನ್ನು ಲೋಕದಲ್ಲಿ ಹಾರಿಸಬೇಕು ಎಂಬ ಮಿಶನ್ ಸಾಮಾನ್ಯ ಕೆಲಸವಲ್ಲ. ಇದು ಬಹಳ ವಿಶಾಲವಾದ ಕಾರ್ಯವಾಗಿದೆ. ಲೋಕದಲ್ಲಿ ಈ ಸಂದೇಶವನ್ನು ಹರಡಲು ಖರ್ಚುಗಳ ಆವಶ್ಯಕತೆಯಿದೆ. ಅಲ್ಲಾಹನ ಅನುಗ್ರಹದಿಂದ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು ಎಂಬ ಅಲ್ಲಾಹನ ಆದೇಶವನ್ನು ಅರಿತುಕೊಂಡು ಜಮಾಅತಿನ ಸಹೋದರರು ಈ ಖರ್ಚುವೆಚ್ಚಗಳನ್ನು ಈಡೇರಿಸಲು ಪ್ರಯತ್ನಿಸುತ್ತಾರೆ. ಲೋಕದ ವಿವಿಧ ದೇಶಗಳಲ್ಲಿ ಹರಡಿರುವ ಅಹ್ಮದಿಯರು ತಮ್ಮ ಧನತ್ಯಾಗಗಳ ಎಂತಹ ಉದಾಹರಣೆಗಳನ್ನು ಮುಂದಿರಿಸುತ್ತಾರೆ ಎಂದರೆ, ಇದರಿಂದ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ಸಂದೇಶವಾಹಕನೇ ಆಗಿದ್ದಾನೆ ಎಂಬ ವಿಶ್ವಾಸವು ಹಿಂದಿಗಿಂತ ಹೆಚ್ಚು ದೃಢವಾಗುತ್ತದೆ. ಹಝ್ರತ್ ಮಸೀಹ್ ಮೌಊದ್‌ರ(ಅ) ಮೂಲಕವೇ ಕೊನೆಗಾಲದಲ್ಲಿ ಇಸ್ಲಾಮಿನ ಸುಂದರ ಶಿಕ್ಷಣ ಲೋಕದಲ್ಲಿ ಹರಡಬೇಕಾಗಿತ್ತು. ಈ ಒಂದು ಕಾರ್ಯವನ್ನೇ ಶತ್ರುಗಳು ತಮ್ಮ ಹೃದಯಗಳಲ್ಲಿ ಇರುವ ಹಗೆಗಳನ್ನು ತೊರೆದು ಯೋಚಿಸಿ ನೋಡುವುದಾದರೆ, ಈ ಒಂದು ಚಿಹ್ನೆ ಅಥವಾ ದೃಷ್ಟಾಂತದಿಂದಲೇ ಅವರ ಹೃದಯದಲ್ಲಿ ಇರುವ ಅನಾವಶ್ಯಕ ವಿರೋಧವನ್ನು ದೂರಮಾಡುವುದು. ಆದರೆ ಅವರ ಹೃದಯಗಳು ಬಂಡೆಕಲ್ಲುಗಳಿಗಿಂತಲೂ ಕಠಿಣವಾಗಿವೆ. ವಿಶೇಷವಾಗಿ ಈ ನಾಮಧಾರಿಗಳಾದ ಉಲೇಮಗಳ ಹೃದಯಗಳು. ಹೇಗಿದ್ದರೂ ಅವರು ಸಂಗತಿ ಅಲ್ಲಾಹನೊಂದಿಗೆ ಆಗಿದೆ.

ನಾನು ಹೇಳಿದಂತೆ, ಹಝ್ರತ್ ಮಸೀಹ್ ಮೌಊದ್‌ರ(ಅ) ದೌತ್ಯವನ್ನು ಹಾಗೂ ಧರ್ಮಪ್ರಚಾರದ ಕೆಲಸವನ್ನು ಪರಿಪೂರ್ಣಗೊಳಿಸಬೇಕು ಮತ್ತು ಹಝ್ರತ್ ಪೈಗಂಬರರ(ಸ) ಧ್ವಜವನ್ನು ಲೋಕದಲ್ಲಿ ನಾಟಬೇಕು ಎಂಬ ಯೋಚನೆಯೊಂದಿಗೆ ಅಹ್ಮದಿಯರು ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ನೀವು ಅಲ್ಲಾಹನ ಮಾರ್ಗದಲ್ಲಿ ಏನನ್ನು ಖರ್ಚು ಮಾಡಿದ್ದರೂ, ಏನೇ ಸಂಪತ್ತನ್ನು ಖರ್ಚು ಮಾಡಿದರೂ ಅದನ್ನು ಹಲವು ಪಟ್ಟು ವರ್ಧಿಸಿ ಮರಳಿಕೊಡುವೆನು ಎಂಬುದು ನಿಸ್ಸಂಶಯವಾಗಿಯೂ ಅಲ್ಲಾಹನ ವಾಗ್ದಾನವಾಗಿದೆ. ಆದರೆ ನಮ್ಮ ಉದ್ದೇಶ ಅಲ್ಲಾಹನ ಸಂಪ್ರೀತಿ ಮಾತ್ರವಾಗಿದೆ, ಲೌಕಿಕವಾದ ಪ್ರಯೋಜನ ಸಿಗುವುದಾದರೆ ಅದು ಅಲ್ಲಾಹನ ವರದಾನವಾಗಿದೆ ಎಂಬ ಯೋಚನೆಯನ್ನು ಅನೇಕ ಅಹ್ಮದಿಯರು ಇರಿಸುತ್ತಾರೆ. ನಮ್ಮ ತ್ಯಾಗದಿಂದ ಅಲ್ಲಾಹನು ನಮ್ಮೊಂದಿಗೆ ಸಂಪ್ರೀತನಾಗಬೇಕು ಮತ್ತು ನಮ್ಮ ಪರಲೋಕ ಜೀವಿತ ಸುಂದರವಾಗಬೇಕು ಎಂಬುದಾಗಿದೆ ಅವರ ಯೋಚನೆ.

ಅಹ್ಮದಿಯ ಜಮಾಅತ್ ಕೋಟಿಪತಿಗಳು ಇರುವ ಜಮಾಅತ್ ಏನೂ ಅಲ್ಲ. ಈ ಜಮಾಅತಿನಲ್ಲಿರುವ ಹೆಚ್ಚಿನವರು ಬಡವರು ಮತ್ತು ಮಧ್ಯವರ್ಗದವರಾಗಿರುವರು. ಹೀಗಿದ್ದರೂ ಇದಾಗಿದೆ ಅವರ ತ್ಯಾಗದ ಆವೇಶ. ಇಸ್ಲಾಮಿನ ಪುನರುಜ್ಜೀವನದಲ್ಲಿ ನಮ್ಮ ಪಾಲು ಸಹ ಇರಬೇಕು

ಎಂಬ ಪ್ರಯತ್ನದಲ್ಲಿ ಇರುತ್ತಾರೆ. ಆಗ ಅವರ ಮಾಮೂಲಿ ತ್ಯಾಗಗಳು ಕೂಡ ಅಲ್ಲಾಹನು ಅಂಗೀಕರಿಸಿ ಅದಕ್ಕೆ ಲಕ್ಷಗಟ್ಟಲೆ ಕೋಟಿಗಟ್ಟಲೆ ಪೌಂಡಿಗೆ ಸಮಾನವಾದ ಫಲವನ್ನು ಒದಗಿಸುತ್ತಾನೆ. ಆದ್ದರಿಂದ ಯಥಾರ್ಥ ಸಂಗತಿ ಅಲ್ಲಾಹನ ಅಂಗೀಕಾರವಾಗಿದೆ. ಅಲ್ಲಾಹನ ಅನುಗ್ರಹದಿಂದ ಈ ಜಮಾಅತ್ ತಮ್ಮ ಪರಿಮಿತವಾದ ಮಾರ್ಗಗಳಿಂದ ಮತ್ತು ಸಾಧನಸಾಮಗ್ರಿಗಳಿಂದ ಕೂಡ ಈ ಕೆಲಸವನ್ನು ಮಾಡುತ್ತದೆ. ಆಗ ಅಲ್ಲಾಹನು ಅದರಲ್ಲಿ ಎಷ್ಟು ಅನುಗ್ರಹ ಸುರಿಸುತ್ತಾನೆ ಎಂದರೆ ಈ ಕೆಲಸಕ್ಕಾಗಿ ಬಹುಶಃ ಅನೇಕ ಮಿಲಿಯನ್ ಪೌಂಡ್‌ಗಳ ಖರ್ಚು ಮಾಡುತ್ತಿದ್ದಾರೆ ಎಂದು ನೋಡುವವನು ಭಾವಿಸುತ್ತಾನೆ. ಆದರೆ ಇದು ಬಡ ಜನರ ಹಣವಾಗಿದೆ ಎಂದು ಅವರಿಗೆ ಗೊತ್ತಿರುವುದಿಲ್ಲ. ಅಲ್ಲಾಹನು ಅದನ್ನು ಅನುಗ್ರಹಿಸುತ್ತಾನೆ ಎಂದು ಮಾತ್ರ. ಆದ್ದರಿಂದ ನಮ್ಮ ಸಣ್ಣ ಕೆಲಸಗಳೂ ದೊಡ್ಡದಾಗಿ ಕಾಣಲ್ಪಡುತ್ತವೆ.

ಇಲ್ಲಿ ಒಂದು ಸಂಗತಿಯನ್ನು ಹೇಳಬಯಸುತ್ತೇನೆ. ಜಮಾಅತ್ ದೊಡ್ಡದಾಗುವಾಗ ವಿವಿಧ ರೀತಿಯ ಯೋಚನೆಯಿರುವವರು ಜಮಾಅತಿನಲ್ಲಿ ಇರುತ್ತಾರೆ. ನಾವು ಏಕೆ ಮತ್ತು ಯಾವುದಕ್ಕಾಗಿ ಚಂದಾ ನೀಡುತ್ತಿದ್ದೇವೆ ಎಂದು ಪ್ರಶ್ನಿಸುವ ಕಡಿಮೆ ತರಬೇತಿ ಹೊಂದಿರುವ ನವ ಅಹ್ಮದಿಯರು ಅಥವಾ ಹಳೆಯ ಅಹ್ಮದಿಯರಲ್ಲೂ ಕಡಿಮೆ ತರಬೇತಿಯ ಕಾರಣದಿಂದ ಇರುವ ಜನರನ್ನು ನಾವು ನೋಡುತ್ತೇವೆ. ಮನೆಗಳಲ್ಲೂ ಸಹ ಅವರು ಮಾತನಾಡುತ್ತಾರೆ, ಮಕ್ಕಳ ಮುಂದೆಯೂ ಅವರು ಮಾತನಾಡುತ್ತಾರೆ. ಹೀಗೆ ಮಕ್ಕಳ ಮನಸ್ಸಿನಲ್ಲೂ ಸವಾಲು ಏಳಲು ಶುರುವಾಗುತ್ತದೆ. ಆದ್ದರಿಂದ ಮೊದಲು ಹುದ್ದೇದಾರರು ತಮ್ಮ ವರ್ತನೆ ಮತ್ತು ಕೆಲಸಗಳಿಂದ ಜನರ ಸಂಶಯಗಳನ್ನು ದೂರಮಾಡಬೇಕು. ಜನರು ನೀಡುವ ಚಂದವನ್ನು ವಿಶೇಷವಾದ ಕೆಲಸಕ್ಕಾಗಿ ಖರ್ಚು ಮಾಡಲಾಗುತ್ತದೆ ಎಂಬ ಭರವಸೆ ಜನರ ಮನಸ್ಸಲ್ಲಿ ಮೂಡುವಂತೆ ನೋಡಬೇಕು. ಈ ಚಂದಾದ ಹಣವನ್ನು ವಿಶೇಷವಾದ ಉದ್ದೇಶಕ್ಕಾಗಿ ಖರ್ಚು ಮಾಡಲಾಗುತ್ತದೆ ಎಂದು ಅವರಿಗೆ ಮನವರಿಕೆ ಮಾಡಿಸಬೇಕು. ಧನತ್ಯಾಗದ ಪ್ರಾಧಾನ್ಯವೇನೆಂದು ಪ್ರೀತಿಯಿಂದ ಅವರಿಗೆ ತಿಳಿಸಬೇಕು. ಇದು ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಮುಖ್ಯವಾದ ಸಂಗತಿಯೆಂದೂ ಧನತ್ಯಾಗ ಮಾಡುವುದರ ಪ್ರತಿಫಲವಾಗಿ ಅಲ್ಲಾಹನ ಸಂಪ್ರೀತಿ ಲಭಿಸುವುದೆಂದೂ ಮತ್ತು ಧನತ್ಯಾಗವನ್ನು ಇಸ್ಲಾಮಿನ ಪ್ರಚಾರಕ್ಕಾಗಿ ಖರ್ಚು ಮಾಡಲಾಗುತ್ತದೆ ಎಂದೂ ಅವರಿಗೆ ತಿಳಿಸಬೇಕು. ನಾವು ನಡೆಸುತ್ತಿರುವ ಟಿ.ವಿ ಚಾನೆಲ್‌ಗಾಗಿ ಬಹಳ ಖರ್ಚಾಗುತ್ತದೆ, ಪುಸ್ತಕಗಳು ಮುದ್ರಿತಗೊಳ್ಳುತ್ತವೆ, ಪವಿತ್ರ ಖುರ್‌ಆನ್ ಪ್ರಕಾಶನಗೊಳ್ಳುತ್ತವೆ, ಬಡ ಮಕ್ಕಳ ಶಿಕ್ಷಣಕ್ಕಾಗಿ ಖರ್ಚು ಮಾಡಲಾಗುತ್ತದೆ, ಹಸಿದವರಿಗೆ ಆಹಾರ ಒದಗಿಸಲು ಖರ್ಚು ಮಾಡಲಾಗುತ್ತದೆ, ಮುಬಲ್ಲಿಗರ ಶಿಕ್ಷಣ ಮತ್ತು ಅವರ ಮೂಲಕ ನಡೆಯುವ ತಬ್ಲೀಗಿಗಾಗಿ ಖರ್ಚು ಮಾಡಲಾಗುತ್ತದೆ, ಮಸೀದಿಗಳ ನಿರ್ಮಾಣವಾಗುತ್ತವೆ, ಇದಕ್ಕೆ ಸಂಬಂಧಪಟ್ಟು ಜಮಾಅತಿನ ಅನೇಕ ಖರ್ಚುಗಳಿವೆ. ಜಮಾಅತಿನಲ್ಲಿ ಈ ಕುರಿತು ಬಹಳಷ್ಟು ಸವಾಲುಗಳು ಏಳಲು ಶುರುವಾಗಿವೆ ಎಂದು ನಾನು ಹೇಳುತ್ತಿಲ್ಲ. ಇದನ್ನು ಹೇಳಲು ಕಾರಣವೂ ಹಾಗೇನಲ್ಲ. ಬದಲಾಗಿ ಜಮಾಅತ್ ಹರಡುವಾಗ, ಹರಡುವ ಕಾರಣದಿಂದ ಕೆಡುಕುಗಳನ್ನು ಹರಡುವವರು ಮತ್ತು ಪೈಶಾಚಿಕ ಸಂಶಯಗಳನ್ನು ಉಂಟುಮಾಡುವವರು ಸಹ ಬರುತ್ತಾರೆ. ಅವರು ಪಿತೂರಿ ಮಾಡಲು ಪ್ರಯತ್ನಿಸುತ್ತಾರೆ ಮತ್ತು ಕಡಿಮೆ ತರ್‌ಬಿಯತ್ ಲಭಿಸಿದವ ಮನಸ್ಸಿನಲ್ಲಿ ಸಂಶಯಗಳನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಸದಸ್ಯರ ಯೋಚನೆ ಎಷ್ಟು ದೃಢತೆಯುಳ್ಳದ್ದಾಗಿದೆ ಎಂದರೆ, ಜಮಾಅತಿನ ವ್ಯವಸ್ಥೆಯನ್ನು ನಡೆಸಲು ಖರ್ಚುಗಳ ಆವಶ್ಯಕತೆಯಿವೆ ಎಂದೂ ಅವನ ಮಾರ್ಗದಲ್ಲಿ ಖರ್ಚು ಮಾಡಬೇಕೆಂಬುದು ಅಲ್ಲಾಹನ ಆಜ್ಞೆಯಾಗಿದೆ ಎಂದೂ ಅವರಿಗೆ ಗೊತ್ತಿರುತ್ತದೆ. ಒಟ್ಟಿನಲ್ಲಿ ಜಮಾಅತಿನಲ್ಲಿ ಇಂತಹ ಅನೇಕ ಉದಾಹರಣೆಗಳಿವೆ. ಜನರು ತಮ್ಮ ಬಳಿ ಏನೂ ಇಲ್ಲವಾದರೂ, ಹೇಗಾದರೂ ಏರ್ಪಾಡು ಮಾಡಿ ಅಲ್ಲಾಹನ ಸಂಪ್ರೀತಿಗಾಗಿ ಖರ್ಚು ಮಾಡುತ್ತಾರೆ. ಹಾಗೆ ಅಲ್ಲಾಹನು ಸಹ ಅವರ ತ್ಯಾಗಗಳನ್ನು ವ್ಯರ್ಥ ಮಾಡುವುದಿಲ್ಲ. **ವಯರ್‌ಝುಕು ಮಿನ್ ಹೈಸು ಲಾ ಯಹ್‌ತಸಿಬ್** ಎಂಬ ಅಲ್ಲಾಹನ ವಾಗ್ದಾನ ಪ್ರಕಾರ ಅವರಿಗೆ ಅವರು ಯೋಚಿಸಿಯೂ ಇರದ ಮಾರ್ಗಗಳಿಂದ ಜೀವನಾಧಾರದ ಸಾಮಾನುಗಳನ್ನು ಒದಗಿಸುತ್ತಾನೆ. ಅಲ್ಲಾಹನು ಸಹ ಈ ರೀತಿಯಲ್ಲಿ ತನ್ನ ವಾಗ್ದಾನವನ್ನು ಈಡೇರಿಸುತ್ತಾನೆ. ಈ ವಚನವನ್ನು ಅಹ್ಮದಿಯರು ಓದುತ್ತಾರೆ ಎಂದು ಮಾತ್ರವಲ್ಲ, ಅದರಲ್ಲಿ ಹೇಳಲಾದ ವಾಗ್ದಾನ ಈಡೇರುತ್ತಿರುವುದಾಗಿ ನೋಡುತ್ತಾರೆ. ಈ ಕುರಿತು ತಮ್ಮ ಅನುಭವಗಳನ್ನು ಬರೆಯುತ್ತಾರೆ. ನಾನು ಅದರ ಉದಾಹರಣೆಗಳನ್ನು ಸಹ ಮುಂದಿರಿಸುತ್ತೇನೆ. ಇದು ಹಳೆಯ ಮಾತುಗಳೋ ಹಳೆಯ ಜನರ ಕಥೆಗಳೋ ಅಲ್ಲ. ಬದಲಾಗಿ ಇಂತಹ ಅನುಭವಗಳಿಂದ ಈಗಲೂ ಅಲ್ಲಾಹನು ಸತ್ಯವಿಶ್ವಾಸಿಗಳ ವಿಶ್ವಾಸವನ್ನು ದೃಢಗೊಳಿಸುತ್ತಾನೆ. ಯಾರ ಮೇಲೆ ಅಲ್ಲಾಹನ ಅನುಗ್ರಹ ನೇರವಾಗಿ ವರ್ಷಿಸುತ್ತಿದೆಯೋ ಅವರಿಗೆ ಇದರಿಂದ ಪ್ರಯೋಜನವಾಗುತ್ತದೆ ಮತ್ತು ಅವರ ವಿಶ್ವಾಸ ಸುದೃಢವಾಗುತ್ತದೆ. ಮಾತ್ರವಲ್ಲ ಅವರ ಸಮೀಪವಿರುವವರ ವಿಶ್ವಾಸವು ಇದರಿಂದ ಸುದೃಢವಾಗುತ್ತದೆ. ಅವರೂ ಸಹ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ತ್ಯಾಗಗಳಲ್ಲಿ ಮುಂದಿರಲು ಪ್ರಯತ್ನಿಸುತ್ತಾರೆ. ನಾನು ಹೇಳಿದಂತೆ, ಅಲ್ಲಾಹನು ಹೇಗೆ ಅನುಗ್ರಹಿಸುತ್ತಾನೆ ಎಂಬುದರ ಬಗ್ಗೆ ಕೆಲವು ಉದಾಹರಣೆಗಳನ್ನು ನಾನು ಮುಂದಿರಿಸುತ್ತೇನೆ. ತಮ್ಮ ತ್ಯಾಗಗಳ ಬಗ್ಗೆ ಜನರು ನನಗೆ ಪತ್ರವನ್ನು ಬರೆಯುತ್ತಾರೆ.

ಗಿನಿಕನಾಕುರಿಯ ಒಂದು ಉದಾಹರಣೆ, ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ; ತಹ್ರೀಕ್ ಜದೀದಿನ ಖುತ್ಬದಿಂದ ಕೆಲವು ವಿಶ್ವಾಸವರ್ಧಕ ಘಟನೆಗಳನ್ನು ನಾನು ಜಮಾಅತಿನ ಸದಸ್ಯರಿಗೆ ಓದಿ ಹೇಳಿದ್ದೆ. ಇಂತಹ ಮಾದರಿಯನ್ನು ತೋರಿಸಬೇಕೆಂದು ನಾನು ಹೇಳಿದ್ದೆ. ಮೈಮೂನ ಸಾಹಿಬ ಎಂಬ ಹೆಸರಿನ ಒಬ್ಬ ಮಹಿಳೆಯ ಫೋನ್ ಬಂತು. ಅವರು ಹೇಳಿದರು: ಮನೆಯ ಖರ್ಚಿಗಾಗಿ ಹಣವಿರಲಿಲ್ಲ. ಅವರ ಪತಿ ಕೆಲಸಕ್ಕೆ ಸಂಬಂಧಿಸಿ ಹೊರಗೆ ಹೋಗಿದ್ದರು. ಜುಮಾ ನಮಾಝಿನ ನಂತರ ಅವರ ತಂದೆ ಅವರಿಗೆ ಒಂದು ಲಕ್ಷ ಗಿನಿ ಫ್ರಾಂಕ್ ಕರೆನ್ಸಿಯನ್ನು ಕೊಡುಗೆಯಾಗಿ ನೀಡಿದರು. ಆಗ ಆ ಹಣದಿಂದ ಮನೆಯ ಆವಶ್ಯಕತೆಗಾಗಿ ಖರ್ಚು ಮಾಡಬೇಕೋ ಚಂದಾ ನೀಡಬೇಕೋ ಎಂದು ಅರಿಯದೇ ಇದ್ದೆನು. ಅನಂತರ ನಾನು ದುಆ ಮಾಡಿ ಅರ್ಧ ಮೊತ್ತವನ್ನು ಎಂದರೆ, ಐವತ್ತು ಸಾವಿರ ಫ್ರಾಂಕ್ ತಹ್ರೀಕ್ ಜದೀದ್‌ನಲ್ಲಿ ಚಂದಾವಾಗಿ ಪಾವತಿಸಿದೆ. ಅವರು ಹೇಳುತ್ತಾರೆ: ಹೀಗೆ ಮಾಡಿ 24 ಗಂಟೆಗಳಷ್ಟು ಕೂಡ ಆಗಿರಲಿಲ್ಲ. ಅಲ್ಲಾಹನು ನನಗೆ 3 ಲಕ್ಷ ಫ್ರಾಂಕ್ ಅದ್ಭುತಕರವಾಗಿ ನೀಡಿದ್ದನು. ಅಲ್ಲಿಂದ ನನಗೆ ಹಣ ಬರುವುದು ಎಂದು ನಾನು ಯೋಚಿಸಿಯೂ ಇರಲಿಲ್ಲ. ನನಗೆ ಸರಿಯಾದ ತೀರ್ಮಾನ ಮಾಡಲು ಅಲ್ಲಾಹನು ಸೌಭಾಗ್ಯ ನೀಡಿದ್ದಕ್ಕೆ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದೆ. ನನ್ನ ವಿಶ್ವಾಸವು ಇದರಿಂದ ಬಹಳ ಹೆಚ್ಚು ವರ್ಧಿಸಿತು.

ಕೆನಡಡ ಒಂದು ಮಜ್‌ಲಿಸಿನ ಸದರ್ ಹೇಳುತ್ತಾರೆ: ತಹ್ರೀಕ್ ಜದೀದ್ ಸೆಕ್ರಟರಿಯು ತಹ್ರೀಕ್ ಜದೀದಿನ ಚಂದಾವನ್ನು ಪೂರ್ತಿ ಮಾಡಲು ಚಂದಾ ಬಾಕಿಯಿದ್ದವರ ಚಂದಾವನ್ನು ಟೋಟಲ್ ಮಾಡಿದಾಗ ಅದು ಬಹಳ ಸ್ವಲ್ಪ ಹಣವಾಗಿತ್ತು. 325 ಡಾಲರ್ ಆಗಿತ್ತು. ಇದನ್ನು ನಾನೇ ಪಾವತಿಸುತ್ತೇನೆ ಎಂದು ನಾನು ಯೋಚಿಸಿದೆ. ಆದರೆ ನಾನು ಬ್ಯಾಂಕ್ ಅಕೌಂಟ್ ನೋಡಿದಾಗ ಅದರಲ್ಲಿ ಹಣವಿರಲಿಲ್ಲ ಎಂದು ಮಾತ್ರವಲ್ಲ, ಅಕೌಂಟ್ ಮೈನಸ್‌ನಲ್ಲಿ ಇತ್ತು. ಮೂರು ಡಾಲರ್ ಹೆಚ್ಚು ಖರ್ಚಾಗಿತ್ತು. ಆದರೆ ಮರುದಿನ ನಾನು ಅಕೌಂಟ್ ಚೆಕ್ ಮಾಡಿದಾಗ ನಾನು ಆಶ್ಚರ್ಯಗೊಂಡೆನು. ನನ್ನ ಅಕೌಂಟಿನಲ್ಲಿ ಮೂರು ಸಾವಿರ ಡಾಲರ್‌ಗಿಂತ ಸ್ವಲ್ಪ ಹೆಚ್ಚು ಹಣವಿತ್ತು. ಈ ಹಣವು ಬಹಳ ಕಾಲದಿಂದ ಪೆಂಡಿಂಗ್ ಆಗಿ ಇದ್ದ ಹಣವಾಗಿತ್ತು. ಸಿಗಬೇಕಿದ್ದ ಹಣವಾಗಿತ್ತು. ಆದರೆ ಸಿಗುವ ಯಾವುದೇ ಮಾರ್ಗ ಕಾಣುತ್ತಿರಲಿಲ್ಲ. ಆದರೆ ಬಾಕಿಯಿದ್ದ ಚಂದಾವನ್ನು ಪಾವತಿಸುವ ನನ್ನ ನಿಯ್ಯತ್ತನ್ನು ಅಲ್ಲಾಹನು ನೋಡಿದಾಗ, ಅಲ್ಲಾಹನು ಅದಕ್ಕಿರುವ ಏರ್ಪಾಡನ್ನು ಮಾಡಿದನು. ಬಹಳ ಕಾಲದಿಂದ ಪೆಂಡಿಂಗ್ ಆಗಿದ್ದ ಮೊತ್ತ ಬೇಗನೇ ಸಿಕ್ಕಿತು.

ಸೌತ್ ಆಫ್ರಿಕದ ಒಬ್ಬ ಸಹೋದರನಾದ ಶಾಹೀನ್ ಸಾಹಿಬ್ ಹೇಳುತ್ತಾರೆ: ನಾನು ನನ್ನ ಬ್ಯಾಂಕ್ ಅಕೌಂಟಿನಲ್ಲಿ ಇದ್ದ ಹಣದ ಅರ್ಧದಷ್ಟನ್ನು ತಹ್ರೀಕ್ ಜದೀದಿನ ಚಂದವಾಗಿ ಪಾವತಿಸಿದೆ. ಅದು ದೊಡ್ಡ ಮೊತ್ತವಾಗಿರಲಿಲ್ಲ. ಆದರೆ ತಹ್ರೀಕ್ ಜದೀದ್ ಚಂದಾ ಪಾವತಿಯ ಕೊನೆಯ ತಿಂಗಳಾಗಿತ್ತು. ಈಗ ಕೊಡದಿದ್ದರೆ ಮತ್ತೆ ಅದರ ಅವಕಾಶ ಸಿಗುವುದೋ ಇಲ್ಲವೋ ಎಂದು ಅರಿಯದು. ಆದ್ದರಿಂದ ಅದನ್ನು ಪಾವತಿಸಿದೆ. ಅದೇ ದಿನ ಅವರ ತಂದೆ ಅವರನ್ನು ಭೇಟಿಯಾಗಲು ಬಂದರು. ಸ್ವಲ್ಪ ಹಣವನ್ನು ಟ್ರಾನ್ಸ್‌ಫರ್ ಮಾಡಿದ್ದೇನೆ ಅದರಿಂದ ಆವಶ್ಯಕತೆಗಳ ಪೂರೈಕೆಯಾಗುವುದು ಎಂದು ತಂದೆ ಹೇಳಿದರು. ಶಾಹೀನ್ ಸಾಹಿಬ್ ಹೇಳುತ್ತಾರೆ: ನನ್ನ ತಂದೆಯಿಂದ ಲಭಿಸಿದ ಹಣವು ನಾನು ತಹ್ರೀಕ್ ಜದೀದಿಗಾಗಿ ಪಾವತಿಸಿದ ಹಣದ ಇಪ್ಪತ್ತು ಪಟ್ಟು ಹೆಚ್ಚಾಗಿತ್ತು. ಹೀಗೆ ತಂದೆಯಿಂದ ಲಭಿಸಿದ ಹಣದಿಂದ ಹೆಚ್ಚಿನ ಚಂದವನ್ನು ಪಾವತಿಸಿದರು. ಅವರು ಹೇಳುತ್ತಾರೆ: ಈ ಚಂದವನ್ನು ಪಾವತಿಸಿದ ನಂತರ ಅದೇ ದಿನ ಸಂಜೆಗೆ ನನ್ನ ಕೆಲಸದ ಜಾಗದಿಂದ ನನ್ನ ಬಾಸಿನ ಫೋನ್ ಬಂತು. ಬಯಸುವುದಾದರೆ ಅವರು ನನಗೆ ದುಬೈಯಲ್ಲಿ ಒಂದು ನೌಕರಿ ಕೊಡುವುದಾಗಿ ಹೇಳಿದರು. ಆಗ ನಾನು ಸರಿಯೆಂದು ಹೇಳಿದೆನು. ಹೀಗೆ ನನಗೆ ವಿದೇಶದಲ್ಲಿ ಒಂದು ಉತ್ತಮ ಉದ್ಯೋಗದ ವ್ಯವಸ್ಥೆಯೂ ಆಯಿತು. ಈ ಎರಡು ಘಟನೆಗಳು ಆಕಸ್ಮಿಕವಲ್ಲ. ಇದು ಚಂದಾ ನೀಡಿದ ಕಾರಣದಿಂದ ಮತ್ತು ತ್ಯಾಗದ ಕಾರಣದಿಂದ ಲಭಿಸಿದ ಅಲ್ಲಾಹನ ಅನುಗ್ರಹವಾಗಿದೆ ಎಂದು ನನಗೆ ಭರವಸೆಯಿದೆ.

ಆಸ್ಟ್ರೇಲಿಯದ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಜಮಾಅತಿನ ಒಬ್ಬ ಮೆಂಬರ್ ಚಂದ ನೀಡುವ ವಾಗ್ದಾನ ಮಾಡಿದರು. ಅವರ ಸಾಂಪತ್ತಿಕ ಸ್ಥಿತಿ ಉತ್ತಮವಾಗಿರಲಿಲ್ಲ. ವಾಗ್ದಾನದ ಪ್ರಕಾರ ಚಂದ ನೀಡಿದಾಗ, ಅಲ್ಲಾಹನು ನೂರುಪಟ್ಟು ವರ್ಧಿಸಿ ಕೊಡುವನು ಎಂದು ಮನಸ್ಸಿನಲ್ಲಿ ದೃಢವಿಶ್ವಾಸ ಹೊಂದಿದ್ದೆ. ಇದು ಅಲ್ಲಾಹನ ವಾಗ್ದಾನವಾಗಿದೆ. ಈ ರೀತಿಯಲ್ಲೂ ಕೆಲವರು ಯೋಚಿಸುತ್ತಾರೆ. ಅವರು ಒಂದು ತುಂಡುಭೂಮಿಯನ್ನು ಪ್ಲಾಟನ್ನು ಖರೀದಿ ಮಾಡಿದ್ದರು. ಅದರ ಬೆಲೆ ವರ್ಧಿಸುವ ಯಾವುದೇ ಪ್ರತೀಕ್ಷೆ ಇರಲಿಲ್ಲ. ಆದರೆ ಚಂದ ನೀಡಿದ ನಂತರ ಅದ್ಭುತಕರವಾಗಿ ಆ ಪ್ಲಾಟಿನ ಬೆಲೆ ನೂರುಪಟ್ಟುಗಿಂತ ವರ್ಧಿಸಿತು. ಅಲ್ಲಾಹನು ಅವರ ಧನತ್ಯಾಗವನ್ನು ಸ್ವೀಕರಿಸುತ್ತಾ ಅನುಗ್ರಹಿಸಿದ್ದಾನೆ ಎಂದು ನನಗೆ ದೃಢವಿಶ್ವಾಸವಾಯಿತು.

ಕಝಾಕಿಸ್ತಾನದ ಮುಬಲ್ಲಿಗ್ ಸಾಹಿಬ್‌ರು ಬರೆಯುತ್ತಾರೆ: ಅಲಿ ಬೇಕ್ ಸಾಹಿಬ್ ಎಂಬ ಹೆಸರಿನ ಒಬ್ಬ ನಿಷ್ಠಾವಂತ ಅಹ್ಮದಿಯಿರುವರು. ಅವರು ಹತ್ತು ಸಾವಿರ ತಂಗೆ ಕರೆನ್ಸಿ ತಹ್ರೀಕ್ ಜದೀದ್ ಮುಂತಾದ ಚಂದಗಳಲ್ಲಿ ನೀಡಿದರು. ಅನಂತರ ಅವರು ಕೆಲಸಕ್ಕಾಗಿ ಹೋದರು. ಕೆಲವೇ ದಿನಗಳಲ್ಲಿ ಕಂಪೆನಿಯ ಉನ್ನತ ಅಧಿಕಾರಿ ಅವರನ್ನು ಕರೆದು ಹೀಗೆ ಹೇಳಿದರು: ನಮ್ಮ ಕಂಪನಿಗೆ ಈ ಬಾರಿ ಲಾಭ ಸಿಕ್ಕಿದೆ. ಆದ್ದರಿಂದ ಪೂರ್ತಿ ಕಂಪೆನಿಯಲ್ಲಿ ಉತ್ತಮವಾಗಿ ಕೆಲಸ ಮಾಡಿದ ಮೂವರಿಗೆ ಒಂದು ಲಕ್ಷ ಬೋನಸ್ ನೀಡಲು ನಾವು ತೀರ್ಮಾನಿಸಿದ್ದೇವೆ. ಅವರು ಹೇಳುತ್ತಾರೆ: ಅಲ್ಲಾಹನು ಚಂದದ ಕಾರಣದಿಂದ ಹತ್ತು ಪಟ್ಟು ವರ್ಧಿಸಿ ನನಗೆ ನೀಡಿದನು. ಅದರ ಯಾವುದೇ ಪ್ರತೀಕ್ಷೆ ನನಗೆ ಇದ್ದಿರಲಿಲ್ಲ.

ಬರ್ಮಿಂಗವಮ್ ಯು.ಕೆ.ಯಿಂದ ಒಬ್ಬ ಸಹೋದರರನು ಬರೆಯುತ್ತಾರೆ: ತನ್ನ ಕುಟುಂಬ ಸಮೇತ 2016ರಲ್ಲಿ ಬೈಅತ್ ಮಾಡಿದ್ದರು. ಬೈಅತಿಗೆ ಮುಂಚೆ ಸಾಂಪತ್ತಿಕ ಸ್ಥಿತಿ ಬಹಳ ಕೆಟ್ಟದ್ದಾಗಿತ್ತು. ಸಾಲ ಕೂಡ ತುಂಬ ಇತ್ತು. ಜಮಾಅತಿಗೆ ಬಂದು ಆರಂಭಿಕ ದಿನಗಳಲ್ಲಿ ತನ್ನ ಸಾಮರ್ಥ್ಯ ಅನುಸಾರ ಕೆಲವೊಮ್ಮೆ ಅದಕ್ಕಿಂತ ಹೆಚ್ಚು ಕೆಲವು ಚಂದಗಳನ್ನು ನೀಡಲು ಶುರುಮಾಡಿದರು. ಅವರ ಪತ್ನಿಗೆ ಸ್ಕೂಲಿನ ಒಂದು ಪ್ರೋಗ್ರಾಮಿನಲ್ಲಿ ತಬ್ಲೀಗಿ ಸ್ಟಾಲ್ ಮಾಡಬೇಕಾಗಿತ್ತು. ಆದ್ದರಿಂದ ಮಕ್ಕಳನ್ನು ನೋಡಲು ಅವರು ರಜೆ ಮಾಡಿದರು. ಈ ರಜೆಯ ಕಾರಣದಿಂದ ನೂರು ಪೌಂಡಿನ ನಷ್ಟವಾಗಲಿತ್ತು. ಅದು ಅವರ ಆರ್ಥಿಕ ಸ್ಥಿತಿ ಉತ್ತಮವಾಗಿರದ ಕಾರಣದಿಂದ ಬಹಳ ದೊಡ್ಡ ಮೊತ್ತವಾಗಿತ್ತು. ಅಲ್ಲಾಹನ ಕೆಲಸಕ್ಕಾಗಿ ರಜೆ ಮಾಡಬೇಕು, ತ್ಯಾಗವನ್ನು ಮಾಡಬೇಕು ಎಂದು ಯೋಚಿಸಿ ರಜೆ ಮಾಡಿದರು. ಆದರೆ ಅಲ್ಲಾಹನು ಬೇರೆಯೇ ಏರ್ಪಾಡು ಮಾಡಿದ್ದನು. ಅವರ ಪತ್ನಿ ತನ್ನ ಕೆಲಸ ಮುಗಿಸಿ ಮನೆಗೆ ತಲುಪಿದಾಗ ಅವರ ಬಾಸಿನ ಫೋನ್ ಬಂತು. ಬಾಸ್ ಹೇಳಿದರು: ಒಂದು ಗಂಟೆಯೊಳಗೆ ಆಫೀಸಿಗೆ ಬಾ, ಎಮರ್ಜನ್ಸಿ ಕೆಲಸವಿದೆ. ಅವರು ಬೇಗನೆ ಹೊರಟರು. ಆ ದಿನ ಕೇವಲ ಒಂದು ಗಂಟೆ ಕೆಲಸ ಮಾಡಿದರು. ಪೂರ್ತಿ ದಿನದ ಹಣವಾದ ನೂರು ಪೌಂಡ್ ಅವರಿಗೆ ಲಭಿಸಿತು. ಮನೆಗೆ ಬಂದು ಅವರು ತನ್ನ ಪತ್ನಿಗೆ ಇದನ್ನು ಹೇಳಿದರು. ಹೊಸದಾಗಿ ಅಹ್ಮದಿಯಾಗಿದ್ದರು. ಅಲ್ಲಾಹನ ಈ ಕೊಡುಗೆಯ ಕಾರಣದಿಂದ ಅವರು ಅನೇಕ ದಿನಗಳು ಸಂತೋಷಗೊಂಡಿದ್ದರು ಮತ್ತು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿದ್ದರು.

ಖಾದಿಯಾನಿನ ವಕೀಲುಲ್ ಮಾಲ್ ತಹ್ರೀಕ್ ಜದೀದ್ ಬರೆಯುತ್ತಾರೆ: ಭಾರತದ ರಾಜ್ಯವಾದ ಕೇರಳದ ಕರುಳಾಯಿ ಜಮಾಅತಿನಲ್ಲಿ ಶ್ರೀಮಂತರಾದ ಒಬ್ಬ ಸಹೋದರರಿದ್ದಾರೆ. ಉತ್ತಮ ವ್ಯಾಪಾರಸ್ಥರು ಆಗಿರುವರು. ತಹ್ರೀಕ್ ಜದೀದ್ ಚಂದ ಪಾವತಿಯಲ್ಲಿ ಅಸಾಮಾನ್ಯವಾದ ಆವೇಶವನ್ನು ಸಹ ಹೊಂದಿರುವರು. ಪ್ರತಿ ವರ್ಷ ಹಿರಿಯ ಸಂಖ್ಯೆಯಲ್ಲಿ ಹಣವನ್ನು ನೀಡುತ್ತಾರೆ. ಈ ವರ್ಷ ಕೊರೋನದ ಕಾರಣದಿಂದ ಹೆಚ್ಚಿನ ಹಣವನ್ನು ನೀಡುವ ಆರ್ಥಿಕ ಸ್ಥಿತಿಯನ್ನು ಅವರು ಹೊಂದಿರಲಿಲ್ಲ. ವಸಿಯ್ಯತ್ ಮತ್ತು ಇತರ ಚಂದಗಳನ್ನು ಅವರು ಪಾವತಿಸಿದ್ದರು. ಆದರೆ ತಹ್ರೀಕ್ ಜದೀದ್ ಚಂದ ನೀಡಲು ಅವರ ಬಳಿಯಲ್ಲಿ ಹಣವಿರಲಿಲ್ಲ. ಅವರು ಹೇಳಿದರು: ಅಲ್ಲಾಹನು ಸದಾ ಚಂದಾಗಳನ್ನು ನೀಡಲು ಸೌಭಾಗ್ಯ ನೀಡುತ್ತಾನೆ. ಆದರೆ ಈಗ ಬಾಹ್ಯವಾಗಿ ಯಾವುದೇ ಮಾರ್ಗ ಕಾಣುತ್ತಿಲ್ಲ. ಹೇಗಿದ್ದರೂ ಅಲ್ಲಾಹನು ಏನಾದರೂ ಏರ್ಪಾಡು ಮಾಡುವನು ಎಂದು ಭರವಸೆಯಿದೆ. ತಹ್ರೀಕಿನ ವರ್ಷ ಕೊನೆಗೊಳ್ಳುವುದಕ್ಕೆ ಕೇವಲ ಎರಡು ದಿನಗಳು ಬಾಕಿಯಿದ್ದಾಗ ಹತ್ತು ಲಕ್ಷ ರೂಪಾಯಿಗಳನ್ನು ತಹ್ರೀಕ್ ಜದೀದಿಗೆ ಕೊಟ್ಟರು. ಜುಮಾದ ದಿನ ಮುರಬ್ಬಿ ಸಾಹಿಬರು ಖುತ್ಬದಲ್ಲಿ ತಹ್ರೀಕ್ ಜದೀದ್ ಸಂಬಂಧಿಸಿ ಕೆಲವು ಹಿಂದಿನ ಘಟನೆಗಳನ್ನು ಜನರಿಗೆ ಓದಿ ಹೇಳಿದ್ದರು. ಇದರಿಂದ ಅವರು ಬಹಳ ಪ್ರಭಾವಿತಗೊಂಡರು. ಅನಂತರ ಹತ್ತು ಲಕ್ಷಕ್ಕೆ ಬದಲಾಗಿ 18 ಲಕ್ಷ ರೂಪಾಯಿಯನ್ನು ಚಂದವಾಗಿ ನೀಡಿದರು. ಒಂದು ಸರ್ಕಾರಿ ಪ್ರೋಜೆಕ್ಟ್ ಲಭಿಸುವುದು ಎಂದು ಅವರಿಗೆ ಈಗ ಪ್ರತೀಕ್ಷೆಯಿದೆ. ಅದು ಲಭಿಸಿದರೆ, ತಹ್ರೀಕ್ ಜದೀದಿನಲ್ಲ ಇನ್ನಷ್ಟು ಹಣವನ್ನು ನೀಡುವುದಾಗಿ ಅವರು ಹೇಳಿರುವರು. ಹೇಗಿದ್ದರೂ ಅಹ್ಮದಿಯರಾದ ಶ್ರೀಮಂತರಲ್ಲೂ ತ್ಯಾಗ ಮನೋಭಾವವನ್ನು ಹೊಂದಿರುವ ಜನರು ಇದ್ದಾರೆ. ಅವರು ಹಣ ಲಭಿಸಿದರೆ, ಅದನ್ನು ಹೇಳದೇ ಬಚ್ಚಿಡುವುದಿಲ್ಲ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಪ್ರಯತ್ನಿಸುತ್ತಾರೆ.

ಬುರ್ಕಿನಾಫೋಸದ ಮುಬಲ್ಲಿಗ್ ಸಾಹಿಬ್ ಬರೆಯುತ್ತಾರೆ: ಹಬೀಬ್ ಸಈದ್ ಎಂಬ ಹೆಸರಿನ ಒಬ್ಬ ಮೆಂಬರ್ ಇರುವರು. 1700 ಫ್ರಾಂಕ್ ಸೀಫ ಅವರ ಚಂದ ಬ್ಯಾಲನ್ಸ್ ಇತ್ತು. ವರ್ಷ ಮುಕ್ತಾಯಗೊಳ್ಳಲು ಕೇವಲ ಒಂದು ವಾರ ಬಾಕಿಯಿತ್ತು. ಹೇಗಿದ್ದರು ಅವರು ಪರಿಶ್ರಮಪಟ್ಟು 2000 ಸೀಫ ಪಾವತಿಸಿದರು. ಅದು ಬ್ಯಾಲನ್ಸ್‌ಗಿಂತ ಸ್ವಲ್ಪ ಹೆಚ್ಚಾಗಿತ್ತು. ಅವರು ಚಂದಾ ಪಾವತಿಸಿ ಒಂದು ಗಂಟೆ ಕೂಡ ಆಗಿರಲಿಲ್ಲ. ಯಾರೋ ಪರಿಚಿತರು 10 ಸಾವಿರ ಫ್ರಾಂಕ್ ಅವರಿಗೆ ಕಳುಹಿಸಿದರು. ಒಂದು ಗಂಟೆಯ ನಂತರ ಇನ್ನು 10000 ಫ್ರಾಂಕ್ ಸೀಫ ಕಳುಹಿಸಿದರು. ಅನಂತರ ಆ ಪರಿಚಿತ ವ್ಯಕ್ತಿ ಅವರಿಗೆ ಫೋನ್ ಮಾಡಿ ಹೇಳಿದರು: ನಿನ್ನೆ 20 ಸಾವಿರ ಫ್ರಾಂಕ್ ಸೀಫ ನಾನು ನಿಮಗೆ ಕೊಡುಗೆಯಾಗಿ ನೀಡಿದ್ದೇನೆ. ಸಈದ್ ಸಾಹಿಬ್ ಹೇಳುತ್ತಾರೆ: ಆ ಪರಿಚಿತನು ಇಂದಿನ ತನಕ ಯಾವುದೇ ಹಣವನ್ನು ನನಗೆ ಕಳುಹಿಸಿರಲಿಲ್ಲ. ಇದು ಮೊದಲ ಬಾರಿ ಈ ರೀತಿಯಾಗಿದೆ. ನಾನು 2000 ಬ್ಯಾಲನ್ಸ್ ಪಾವತಿ ಮಾಡಿದಾಗ, ಅಲ್ಲಾಹನು ಅದನ್ನು ಹತ್ತು ಪಟ್ಟು ವರ್ಧಿಸಿ 20000 ಫ್ರಾಂಕ್ ಸೀಫ ಎರಡು ಗಂಟೆಯೊಳಗೆ ನೀಡಿದನು. ಈ ರೀತಿಯಲ್ಲಿ ಜನರ ವಿಶ್ವಾಸ ವರ್ಧಿಸುತ್ತದೆ.

ಸಿರಿಲಿಯೋನಿನ ಲಂಬಿ ಎಂಬ ಒಂದು ರೀಜನಿನ ಮುಅಲ್ಲಿಮ್ ಸಾಹಿಬ್ ಬರೆಯುತ್ತಾರೆ: ಅಬ್ದುಲ್ಲಾಹ್ ಸಾಹಿಬ್ ಇಲ್ಲಿಯ ಹಿರಿವಯಸ್ಸಿನ ಸದಸ್ಯರಾಗಿರುವರು. ಅವರ ಕಳೆದ ವರ್ಷದ ತಹ್ರೀಕ್ ಜದೀದ್ ವಾಗ್ದಾನ 25000 ಲಿಯೋನ್ ಆಗಿತ್ತು. ಈ ವರ್ಷ ಅವರು 50 ಸಾವಿರದ ವಾಗ್ದಾನವನ್ನು ಬರೆಸಿದರು. ಅವರು ಆರ್ಥಿಕವಾಗಿ ಕಷ್ಟತೆಯಲ್ಲಿದ್ದರು. ತಹ್ರೀಕ್ ಜದೀದಿನ ವಸೂಲಿಯ ಬಗ್ಗೆ ಘೋಷಿಸಲ್ಪಟ್ಟಾಗ ಅವರ ವಾಗ್ದಾನವೆಷ್ಟೆಂದು ಅವರು ಮುಬಲ್ಲಿಗ್‌ರೊಡನೆ ಕೇಳಿದರು. ಅದು 50 ಸಾವಿರವೆಂದು ಗೊತ್ತಾದಾಗ, ಇಷ್ಟು ಹಣವನ್ನು ಹೇಗೆ ಬರೆಸಿದೆ ಎಂದು ಯೋಚಿಸಿ ಅವರು ಬಹಳ ಆಶ್ಚರ್ಯಗೊಂಡರು. ಅಷ್ಟು ಹಣವನ್ನು ಪಾವತಿಸಲು ಸಾಧ್ಯವಿಲ್ಲವೆಂದು ಯೋಚಿಸಿ ಚಿಂತಿತರಾದರು. ಹೇಗಿದ್ದರೂ ಅವರು ಸುಮ್ಮನಾದರು. ವಾರ ಬಿಟ್ಟು ಅನ್ಸಾರಿನ ಮೀಟಿಂಗ್ ಇತ್ತು. ಅವರು ಬಂದು ಹೇಳಿದರು: ನನ್ನ ಬಳಿ 60 ಸಾವಿರ ಲಿಯೋನ್ ಇದೆ. 20 ಸಾವಿರ ಲಿಯೋನ್ ಮನೆಯಲ್ಲಿ ಬಿಟ್ಟು ಬಂದಿದ್ದೇನೆ. 40 ಸಾವಿರ ಲಿಯೋನ್ ತಹ್ರೀಕ್ ಜದೀದ್ ಚಂದವಾಗಿ ನೀಡಲು ಬಂದಿದ್ದೇನೆ. ಈಗ ನನ್ನ ಬಳಿ ಮರಳಿ ಹೋಗಲು ಬೇಕಾಗಿರುವ ಹಣ ಕೂಡ ಇಲ್ಲ. ಮುಅಲ್ಲಿಂ ಸಾಹಿಬ್ ಹೇಳಿದರು: ನೀವು ತ್ಯಾಗವನ್ನು ಮಾಡಿದ್ದೀರಿ. ಅಲ್ಲಾಹನ ಬೇಕಾಗಿರುವ ಏರ್ಪಾಡನ್ನು ಮಾಡುವನು. ಕಾಲ್ನಡಿಗೆಯಾಗಿಯೇ ಅವರು ಮನೆಗೆ ಹೋಗುತ್ತಿದ್ದರು. ರಸ್ತೆಯಲ್ಲಿ ಹಳೆಯ ಒಬ್ಬ ಪರಿಚಿತನ ಭೇಟಿಯಾಯಿತು. ಅವರೊಡನೆ ಮಾತುಕತೆ ನಡೆಸಿದರು. ಆ ಸ್ನೇಹಿತನು ಮರಳಿ ಹೋಗುವಾಗ 20 ಸಾವಿರ ಲಯೋನ್ ತೆಗೆದು ಅವರಿಗೆ ಕೊಡುಗೆಯಾಗಿ ಕೊಟ್ಟರು. ಬೇರೊಬ್ಬ ಪರಿಚಿತ ಮಹಿಳೆಯಿದ್ದರು. ಅವರ ಆರೋಗ್ಯ ಮತ್ತು ಕ್ಷೇಮವನ್ನು ವಿಚಾರಿಸಲು ಅವರ ಮನೆಗೆ ಹೋದರು. ಅಲ್ಲಿಂದ ಹೊರಡುವಾಗ, ಬಾಡಿಗೆಯಾಗಿ ಉಪಯೋಗಿಸಿರಿ ಎಂದು ಹೇಳಿ ಆ ಮಹಿಳೆ 10 ಸಾವಿರ ಲಯೋನ್ ನೀಡಿದರು. ಅವರು ಚಂದಾವಾಗಿ ನೀಡಿದ ಹಣವನ್ನು ಅಲ್ಲಾಹನು ಅದೇ ರೀತಿಯಲ್ಲಿ ಮರಳಿ ಕೊಟ್ಟನು. ಹೀಗೆ 50 ಸಾವಿರದ ತಮ್ಮ ವಾಗ್ದಾನವನ್ನು ಅವರು ಈಡೇರಿಸಿದರು. ಇದು ಮಾತ್ರವಲ್ಲ, ಅನಂತರ ಬೇರೊಂದು ಅನುಗ್ರಹ ಕೂಡ ಆಯಿತು. ವಿದೇಶದಲ್ಲಿರುವ ಒಬ್ಬ ಸ್ನೇಹಿತನ ಫೋನ್ ಬಂತು. ಅವರು ಹೇಳಿದರು: ಬಹಳ ಕಾಲದಿಂದ ನಿಮ್ಮೊಡನೆ ಸಂಪರ್ಕ ಮಾಡಲು ಸಾಧ್ಯವಾಗಿರಲಿಲ್ಲ. ನಾನು ನಿಮಗೆ ಕೊಡುಗೆಯಾಗಿ ನಾಲ್ಕು ಸಾವಿರ ಲಿಯೋನ್ ಕಳುಹಿಸುತ್ತಿದ್ದೇನೆ. ಚಂದ ಪಾವತಿಸಿದ ಹಣಕ್ಕೆ ಸಮವಾಗಿ ಮಾತ್ರವಲ್ಲ, ಅಲ್ಲಾಹನು ಹತ್ತು ಪಟ್ಟು ಅಧಿಕ ನೀಡಿದನು. ಈ ರೀತಿಯಲ್ಲಿ ನನಗೆ ತ್ಯಾಗಮಾಡಲೂ ಸೌಭಾಗ್ಯ ಲಭಿಸಿತು ಮತ್ತು ನನ್ನ ವಿಶ್ವಾಸವು ವರ್ಧಿಸಿತು.

ಗಿನಿಕನಾಕುರಿಯ ರೀಜನ್ ಆದ ಬೋಕೆ ಎಂಬ ರೀಜನಿನ ಮಿಶನರಿ ಬರೆಯುತ್ತಾರೆ: ತಹ್ರೀಕ್ ಜದೀದ್ ಚಂದ ವಸೂಲಿಗೆ ಸಂಬಂಧಪಟ್ಟು ತಹ್ರೀಕ್ ಜದೀದ್ ವಾರವನ್ನು ಆಚರಿಸಲಾಯಿತು. ಖುತ್ಬದ ವೇಳೆ ತಹ್ರೀಕ್ ಜದೀದ್ ಕಡೆಗೆ ಜನರ ಗಮನ ಸೆಳೆಯಲಾಯಿತು. ಪ್ರತಿಯೊಂದು ಮನೆಗೂ ಹೋಗಿ ಹೇಳಲಾಯಿತು. ಒಬ್ಬ ನಿಷ್ಠಾವಂತ ಸಹೋದರನಾದ ಜಿಬ್ರೀಲ್ ಸಾಹಿಬರು ಕಾರ್ಪೆಂಟರ್ ಬಡಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ಚಂದ ನೀಡುವ ಕಡೆಗೆ ಗಮನ ಹರಿಸಲಾಯಿತು. ಅವರು ಹೇಳಿದರು:

ನಾನು ಇಂದಿನ ಖರ್ಚಿಗಾಗಿ ಇಪ್ಪತ್ತು ಸಾವಿರ ಫ್ರಾಂಕ್ ಇರಿಸಿದ್ದೇನೆ. ಅದನ್ನು ಪೂರ್ಣವಾಗಿ ಚಂದವಾಗಿ ನೀಡುತ್ತೇನೆ. ಈಗ ನಮ್ಮ ಬಳಿ ಏನೂ ಇಲ್ಲ. ಆದರೆ ಅಲ್ಲಾಹನು ನಮ್ಮ ತ್ಯಾಗವನ್ನು ಸ್ವೀಕರಿಸಲಿ ಎಂದಾಗಿದೆ ನಮ್ಮ ಪ್ರಾರ್ಥನೆ. ಜಿಬ್ರೀಲ್ ಸಾಹಿಬ್‌ರು ಹೇಳುತ್ತಾರೆ: ಕಳೆದ ಮೂರು ತಿಂಗಳುಗಳ ಹಿಂದೆ ನಾನು ಮರದ ಒಂದು ಮಂಚವನ್ನು ಮಾರಾಟ ಮಾಡಲು ತಯಾರು ಮಾಡಿದ್ದೆ. ಆದರೆ ಖರೀದಿ ಮಾಡಲು ಯಾರೂ ಬರುತ್ತಿರಲಿಲ್ಲ. ಚಂದ ನೀಡಿದ ಸ್ವಲ್ಪ ಸಮಯದ ನಂತರ ಒಬ್ಬ ವ್ಯಕ್ತಿ ಬೆಡ್ ಖರೀದಿ ಮಾಡಲು ಬಂದನು. ಅವನು ಅದನ್ನು ಒಂದು ಮಿಲಿಯನ್ ಐದು ಲಕ್ಷ ಫ್ರಾಂಕ್ ನೀಡಿ ಅದನ್ನು ಖರೀದಿ ಮಾಡಿದನು. ಆಗ ಜಿಬ್ರೀಲ್ ಸಾಹಿಬ್‌ರು ತಕ್ಷಣವೇ ನಮ್ಮ ಮುಬಲ್ಲಿಗ್‌ರಿಗೆ ಫೋನ್ ಮಾಡಿ ಹೀಗೆ ಹೇಳಿದರು: ಅಲ್ಲಾಹನು ನಮ್ಮ ತ್ಯಾಗವನ್ನು ಸ್ವೀಕರಿಸಿದನು ಎಂದು ಮಾತ್ರವಲ್ಲ, ಬದಲಾಗಿ ಹಲವು ಪಟ್ಟು ವರ್ಧಿಸಿ ನಮಗೆ ಮರಳಿ ಕೊಟ್ಟಿರುವನು. ಸ್ನೇಹಿತರ ವಿಶ್ವಾಸವು ಸುದೃಢಗೊಳ್ಳಲು ಅವರು ಈ ಘಟನೆಯನ್ನು ಅವರ ಸ್ನೇಹಿತರಿಗೂ ಹೇಳುತ್ತಿರುತ್ತಾರೆ.

ಫ್ರೀ ಟೌನ್ ಸಿರಿಲಿಯೋನಿನ ಮುಬಲ್ಲಿಗ್ ಆದ ಮುನೀರ್ ಹುಸೈನ್ ಸಾಹಿಬ್‌ರು ಹೇಳುತ್ತಾರೆ: ಸೂಫಿ ಸೊಂಗೊ ಇಲ್ಲಿಯ ಒಬ್ಬ ಖಾದಿಮ್ ಆಗಿರುವರು. ಎಂದರೆ ಖುದ್ದಾಮುಲ್ ಅಹ್ಮದಿಯ ಸದಸ್ಯ. ಅವರು ಇಲ್ಲಿಯ ವಿದ್ಯಾರ್ಥಿಯಾಗಿರುವರು. ಕಲಿಕೆಗಾಗಿ ಮಸೀದಿಯಲ್ಲೇ ತಂಗಿರುವರು. ಅವರು ತಹ್ರೀಕ್ ಜದೀದಿನ ಖುತ್ಬದ ರಿಕಾರ್ಡಿಂಗ್ ಆಲಿಸಿದರು. ಅದರಲ್ಲಿ ಧನತ್ಯಾಗ ಮಾಡಿದವರ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಸಂಪೂರ್ಣ ಖುತ್ಬವನ್ನು ಗಮನವಿಟ್ಟು ಕೇಳಿದರು. ಆಗ ಧನತ್ಯಾಗದಲ್ಲಿ ಭಾಗಿಯಾಗಲು ಅವರೊಳಗೂ ಆವೇಶ ಮತ್ತು ಉತ್ಸಾಹ ಉಂಟಾಯಿತು. ಆದರೆ ವಿದ್ಯಾರ್ಥಿಯಾಗಿರುವ ಕಾರಣದಿಂದ ನೌಕರಿ ಮಾಡುತ್ತಿರಲಿಲ್ಲ. ಕಲಿಕೆಯ ಖರ್ಚು ಕೂಡ ಕಷ್ಟದಿಂದ ಪೂರೈಸಲ್ಪಡುತ್ತಿತ್ತು. ಆದರೆ ಈ ಎಲ್ಲ ಕಷ್ಟತೆಗಳು ಇದ್ದೂ ಅವರೊಳಗೆ ಒಂದು ಕಳವಳ ಮತ್ತು ಆವೇಶವುಂಟಾಯಿತು. ತಹ್ರೀಕ್ ಜದೀದ್ ಸೆಕ್ರಟರಿಯರೊಡನೆ ಐದು ಲಕ್ಷ ಲಿಯೋನ್ ವಾಗ್ದಾನ ಬರೆಸಿದರು. ಅದನ್ನು ಪಾವತಿಸುವುದು ಅವರಿಗೆ ತುಂಬ ಕಷ್ಟದ ಕೆಲಸವಾಗಿತ್ತು. ಅನಂತರ ಅದನ್ನು ಹೇಗೆ ಪಾವತಿಸುವುದು ಎಂದು ಯೋಚಿಸಿ ಚಿಂತಿತರಾದರು. ಹಗಲು ರಾತ್ರಿ ದುಆಗಳನ್ನು ಮಾಡಲು ಶುರು ಮಾಡಿದರು. ತನ್ನ ವಾಗ್ದಾನವನ್ನು ಪೂರೈಸಲು ಅಲ್ಲಾಹನು ಏನಾದರೂ ಏರ್ಪಾಡು ಮಾಡಲು ಪ್ರಾರ್ಥಿಸಿದರು. ಕೆಲವು ದಿನಗಳ ನಂತರ ಅವರ ಒಬ್ಬ ಸಂಬಂಧಿಕ ಮಗನೊಡನೆ ಬಂದರು. ಅವರನ್ನು ಅಹ್ಮದಿ ಸ್ಕೂಲಿನಲ್ಲಿ ದಾಖಲು ಮಾಡಿಸಲು ಹೇಳಿದರು. ಹೀಗೆ ಅವರು ಪ್ರಿನ್ಸಿಪಲ್‌ನೊಡನೆ ಮಾತನಾಡಿದರು. ಪ್ರಿನ್ಸಿಪಾಲರು ಅವನನ್ನು ದಾಖಲು ಮಾಡಿದರು. ಹುಡುಗನ ತಂದೆ ವಿದ್ಯಾರ್ಥಿಯಾಗಿದ್ದ ಸೂಫಿ ಸೊಂಗೋ ಸಾಹಿಬ್‌ರಿಗೆ ಒಂದು ಲಕ್ಷ ಲಿಯೋನ್ ಕೊಟ್ಟು ಹೀಗೆ ಹೇಳಿದರು: ಇದು ನಿನ್ನ ಆಹಾರ ಇತ್ಯಾದಿಗಳಿಗೆ ಬೇಕಾಗಬಹುದು. ಇದನ್ನು ಇರಿಸು. ಸೂಫಿ ಸೊಂಗೋ ಹೇಳುತ್ತಾರೆ: ಅಂದು ನನ್ನ ಬಳಿ ಊಟಕ್ಕಾಗಿ ಕೂಡ ಏನೂ ಇದ್ದಿರಲಿಲ್ಲ. ಆದರೆ ನಾನು ಈ ಹಣವನ್ನು ಪೂರ್ತಿಯಾಗಿ ತಹ್ರೀಕ್ ಜದೀದ್ ಚಂದವಾಗಿ ಪಾವತಿಸಿದೆ. ಹೀಗೆ ವಾಗ್ದಾನದ ಸ್ವಲ್ಪ ಭಾಗ ಪಾವತಿಸಿದೆ. ಸ್ವಲ್ಪ ದಿನದ ನಂತರ ನನಗೆ ಪರಿಚಯವಿಲ್ಲದ ನಂಬರ್‌ನಿಂದ ನನಗೆ ಒಂದು ಫೋನ್ ಕರೆ ಬಂತು. ಹೀಗೆ ಹೇಳುತ್ತಿದ್ದರು: ಒಂದು ಕೆಲಸವನ್ನು ಮಾಡಬೇಕು. ಉತ್ತಮ ಸಂಬಳ ಕೂಡ ಲಭಿಸುವುದು, ನೀನು ಅದಕ್ಕೆ ತಯಾರಿದ್ದೀಯೋ? ತಯಾರಿದ್ದೇನೆ ಎಂದು ನಾನು ಹೇಳಿದೆನು. ಅಲ್ಲಾಹನ ಅನುಗ್ರಹದಿಂದ ಆ ಕೆಲಸದ ಪ್ರತಿಫಲವಾಗಿ ನನಗೆ ಒಂದು ಮಿಲಿಯನ್ ಲಿಯೋನ್ ಲಭಿಸಿತು. ಇದರಿಂದ ನಾನು ನನ್ನ ತಹ್ರೀಕ್ ಜದೀದಿನ ವಾಗ್ದಾನವನ್ನು ತಕ್ಷಣವೇ ಈಡೇರಿಸಿದೆನು.

ಗೇಬೂನಿನ ಮುಬಲ್ಲಿಗ್ ಇಂಚಾರ್ಜ್ ಸಾಹಿಬ್‌ರು ಬರೆಯುತ್ತಾರೆ: ನವ ಅಹ್ಮದಿಯಾದ ಈಸಾ ದೀನ್‌ದಾರ್ ಸಾಹಿಬ್ ಹೇಳುತ್ತಾರೆ: ಬೈಅತ್ ಮಾಡುವುದಕ್ಕೆ ಮತ್ತು ಕರಾರುವಕ್ಕಾಗಿ ಚಂದ ನೀಡುವುದಕ್ಕೆ ಮೊದಲು ನನ್ನ ಸ್ಥಿತಿ ಏನಾಗಿತ್ತು ಎಂದರೆ, ಎರಡು ಮೂರು ವಾರಗಳು ಕಳೆದರೂ ಕೆಲಸ ಸಿಗುತ್ತಿರಲಿಲ್ಲ. ಆದರೆ ನಿಯತವಾಗಿ ಚಂದಾ ನೀಡಲು ಶುರುಮಾಡಿದಾಗ ಈಗ ಬಹುತೇಕ ಎಲ್ಲ ದಿವಸವು ಕೆಲಸ ಸಿಗುತ್ತಿದೆ. ದೀನ್‌ದಾರ್ ಸಾಹಿಬ್‌ರು ಬಹಳ ದೂರದಿಂದ ಬಂದು ಚಂದವನ್ನು ನೀಡುತ್ತಿದ್ದಾರೆ. ಅವರು ಚಂದ ಕೊಡುವಷ್ಟೇ ಹಣ ಟ್ಯಾಕ್ಸಿಗಾಗಿಯೂ ಖರ್ಚಾಗುತ್ತದೆ. ಟ್ಯಾಕ್ಸಿಗಾಗಿ ಎರಡು ಸಾವಿರ ಖರ್ಚು ಮಾಡುವುದಕ್ಕೆ ಬದಲಾಗಿ ಈಗ ಮನೆಯಿಂದಲೇ ಚಂದಾ ನೀಡುವಂತೆ ಏರ್ಪಾಡು ಮಾಡಲಾಗಿದೆ.

ಜೋರ್ದನಿನ ಒಬ್ಬ ಮಹಿಳೆಯಾದ ಫಜ್ರ್ ಸಾಹಿಬ ಹೇಳುತ್ತಾರೆ: ನಾನು ಅಹ್ಮದಿಯಾಗಿ ಇಪ್ಪತ್ತೆರಡು ವರ್ಷಗಳಾದುವು. ನಾನು ಅಹ್ಮದಿಯಾದ ನಂತರ, ನಾನು ಚಂದಾ ನೀಡಲು ನಿಯ್ಯತ್ ಮಾಡುವಾಗಲೆಲ್ಲ ಅಲ್ಲಾಹನು ನನಗೆ ಅರಿವಿಲ್ಲದ ಮಾರ್ಗಗಳಿಗಿಂತ ಹಣದ ವ್ಯವಸ್ಥೆಯನ್ನು ಮಾಡುತ್ತಾನೆ ಎಂದು ನಾನು ನೋಡಿದ್ದೇನೆ. ಕೆಲವೊಮ್ಮೆ ನಾನು ಚಂದಾ ನೀಡಲು ಉದ್ದೇಶಿಸಿದ್ದಷ್ಟೇ ಹಣ ನನಗೆ ಲಭಿಸುತ್ತದೆ. ಇದು ಜಮಾಅತಿನ ಅನುಗ್ರಹವಾಗಿದೆ. ನಾನು ಇಂಜಿನಿಯರಿಂಗ್ ಮಾಡಿದ್ದೇನೆ. ಮನೆಯಲ್ಲಿ ಇರುವಾಗಲೇ ಏನಾದರೂ ಕೆಲಸ ಸಿಕ್ಕಿದರೆ ಮಾಡುತ್ತೇನೆ. ಚಂದಾ ನೀಡಲು ನನ್ನ ಪತಿಯಿಂದ ನಾನು ಹಣವನ್ನು ಪಡೆಯದೇ ಇರುವುದಾಗಿದೆ ನನ್ನ ಅಭ್ಯಾಸ. ಏಕೆಂದರೆ, ಹೆಚ್ಚಾಗಿ ಅವರ ಬಳಿ ಹಣವಿರುವುದಿಲ್ಲ. ಆದ್ದರಿಂದ ನಾನು ಸ್ವಂತವಾಗಿ ಚಂದಾ ನೀಡುತ್ತೇನೆ. ನಾನು ತಹ್ರೀಕ್ ಜದೀದಿನ ಚಂದವನ್ನು ಈ ಬಾರಿ ಸಂದಾಯ ಮಾಡಿದ್ದೇನೆ ಎಂದು ನಾನು ಭಾವಿಸಿದ್ದೆ. ಸತ್ಯದಲ್ಲಿ ಮರೆತುಬಿಟ್ಟಿತ್ತು. ನನ್ನನ್ನು ನೆನಪಿಸಲಾದಾಗ, ನನ್ನ ಬಳಿ ಒಂದು ದೀನಾರ್ ಕೂಡ ಇದ್ದಿರಲಿಲ್ಲ. ಹೇಗೆ ಚಂದಾವನ್ನು ಸಂದಾಯ ಮಾಡುವುದು ಎಂಬ ಚಿಂತೆಯಲ್ಲಿದ್ದೆ. ಆದರೆ ಒಬ್ಬ ವಿದ್ಯಾರ್ಥಿನಿ ನನ್ನ ಬಳಿಗೆ ಬಂದಳು. ಅವಳಿಗೆ ಟ್ಯೂಶನ್ ಕೊಡಿಸಬೇಕು ಎಂದು ಅವಳು ಹೇಳಿದಳು. ಅಲ್ಲಾಹನ ಅನುಗ್ರಹದಿಂದ ಟ್ಯೂಶನ್ ಫೀಸ್‌ನಿಂದ ಚಂದಾ ಪಾವತಿಯೂ ಆಯಿತು. ಸ್ವಲ್ಪ ಉಳಿತಾಯವು ಆಯಿತು.

ಬುರ್ಕಿನಾಫಾಸೋದಲ್ಲಿ ಬೋಕೋಬಗಾಲ ಎಂಬ ಒಂದು ಜಮಾಅತಿದೆ. ಅಲ್ಲಿಯ ಜಮಾಅತ್ ಸದರ್ ಹೇಳುತ್ತಾರೆ: ನನ್ನ ಬಳಿ ಕೆಲವು ಅಹ್ಮದಿಯೇತರ ಸಹೋದರರು ಬಂದು ಹೀಗೆ ಹೇಳಿದರು: ನಾವು ನಿಮ್ಮ ಕೃಷಿಯನ್ನು ನೋಡಿ ಅಚ್ಚರಿಗೊಂಡಿದ್ದೇವೆ. ಏಕೆಂದರೆ, ಜಮಾಅತಿನ ವತಿಯಿಂದ ನಿರ್ಮಾಣವಾಗಿರುವ ಸ್ಕೂಲಿಗಾಗಿ ನೀವು ಹೆಚ್ಚಿನ ಸಮಯವನ್ನು ನೀಡಿದ್ದೀರಿ. ನಿಮ್ಮ ಕೃಷಿಯನ್ನು ನೋಡಲು ಯಾರೂ ಇರಲಿಲ್ಲ. ಆದರೂ ನಿಮ್ಮ ಫಸಲು ನಮಗಿಂತ ಹೆಚ್ಚು ಉತ್ತಮವಾಗಿದೆ ಎಂದು ನಾವು ನೋಡುತ್ತೇವೆ. ಆದರೆ ನಾವು ನಮ್ಮ ಪೂರ್ಣ ಸಮಯವನ್ನು ನಮ್ಮ ಕೃಷಿಗಳಿಗೆ ನೀಡಿದ್ದೆವು. ಆದರೂ ನಮ್ಮ ಬೆಳೆ ನಿಮ್ಮ ಬೆಳೆಯಷ್ಟು ಉತ್ತಮವಾಗಿಲ್ಲ. ಆಗ ಸದರ್ ಸಾಹಿಬ್‌ರು ಹೇಳಿದರು: ನಾವೆಲ್ಲರೂ ಈ ವಖಾರೆ ಅಮಲ್, ಎಂದರೆ ಸ್ಕೂಲ್ ನಿರ್ಮಾಣದ ಕೆಲಸ ಅಲ್ಲಾಹನು ಮತ್ತು ಜಮಾಅತಿಗಾಗಿ ಮಾಡಿದ್ದೆವು. ನಾವು ಸ್ಕೂಲಿಗಾಗಿ ಸಮಯ ನೀಡುತ್ತಿದ್ದೆವು. ಅದರ ಜೊತೆಗೆ ನಮ್ಮ ಕೃಷಿಯನ್ನು ಸಂರಕ್ಷಿಸು, ಏಕೆಂದರೆ ನಾವು ನಿನ್ನ ಮೇಲೆಯೇ ಭರವಸೆಯನ್ನು ಇರಿಸಿದ್ದೇವೆ ಎಂದು ನಾವು ಅಲ್ಲಾಹನೊಡನೆ ದುಆ ಸಹ ಮಾಡುತ್ತಿದ್ದೆವು. ಆದ್ದರಿಂದ ಅಲ್ಲಾಹನು ನಮ್ಮ ದುಆಗಳನ್ನು ಆಲಿಸಿದನು. ನಮ್ಮ ಫಸಲು ಉತ್ತಮವಾಯಿತು. ಈಗ ನಾವು ಚಂದಾ ಕೂಡ ಅದರ ಪ್ರಕಾರ ನೀಡಿದ್ದೆವು.

ಮಕ್ಕಳು ಸಹ ಹೇಗೆ ತ್ಯಾಗದ ಅರಿವನ್ನು ಹೊಂದಿರುವರು ಎಂದು ನೋಡಿರಿ. ಬಡ ದೇಶಗಳಲ್ಲಿರುವ ಇಂತಹ ವಿವೇಕವಂತ ಮಕ್ಕಳು ಕೆಲವೊಮ್ಮೆ ಅಭಿವೃದ್ಧಿ ಹೊಂದಿರುವ ದೇಶಗಳಲ್ಲೂ ಇರುವುದಿಲ್ಲ. ಘಟನೆ ಹೀಗಿದೆ. ಝುಂಜಬಾರ್ ಪ್ರದೇಶದ ಮುಬಲ್ಲಿಗ್‌ರಾದ ಹುಸೈನ್ ಯೂಸುಫ್ ಸಾಹಿಬ್ ಹೇಳುತ್ತಾರೆ: ಮಕ್ಕಳು ಮಸೀದಿಯ ಹೊರಗೆ ಆಟವಾಡುತ್ತಿದ್ದಾಗ ಹಿರಿ ವಯಸ್ಸಿನ ಒಬ್ಬ ವ್ಯಕ್ತಿ ಅಲ್ಲಿಂದ ದಾಟು ಹೋಗುತ್ತಿದ್ದರು. ಅವರು ಸಂತೋಷದಿಂದ ಮಕ್ಕಳಿಗೆ ಮಿಠಾಯಿಗಳನ್ನು ಖರೀದಿ ಮಾಡಲು 1400 ಶಿಲಿಂಗ್ ನೀಡಿದರು. ಮಕ್ಕಳು ಹಣವನ್ನು ತೆಗೆದು ಒಬ್ಬ ಅಹ್ಮದೀ ಅಂಗಡಿಯವನ ಬಳಿಗೆ ಹೋದರು. ಆ ಹಣವನ್ನು ಚಿಲ್ಲರೆ ಮಾಡಿದರು. ಎಲ್ಲ ಮಕ್ಕಳು ನಾಣ್ಯಗಳನ್ನು ಹಿಡಿದು ಮಸೀದಿಗೆ ಬಂದರು. ತಮ್ಮ ತಮ್ಮ ಪಾಲಿನ ಹಣದಿಂದ ಮಿಠಾಯಿ ಖರೀದಿ ಮಾಡುವುದಕ್ಕೆ ಬದಲಾಗಿ ಪ್ರತಿಯೊಬ್ಬ ಹುಡುಗನು ನೂರು ಶಿಲಿಂಗ್ ಚಂದಾ ನೀಡಿ ಬಹಳ ಸಂತೋಷದಿಂದ ತಮ್ಮ ತಮ್ಮ ರಸೀತಿ ಇರಿಸಿದರು. ಮಕ್ಕಳು ಚಂದಾ ನೀಡಲಿಕ್ಕಾಗಿ ಚಿಲ್ಲರೆ ಮಾಡಿಸಿದರು ಎಂದು ಅಹ್ಮದಿ ಅಂಗಡಿಯವರಿಗೆ ಗೊತ್ತಾದಾಗ ಅವರು ಬಹಳ ಆಶ್ಚರ್ಯಗೊಂಡರು. ಈ ಮಕ್ಕಳು ಇನ್‌ಶಾ ಅಲ್ಲಾಹ್, ಅಹ್ಮದಿಯಾ ಜಮಾಅತಿನ ಬಲಿಷ್ಠ ಅಡಿಪಾಯವಾಗುವರು.

ಇನ್ನು ಮಕ್ಕಳ ತ್ಯಾಗದ ಒಂದು ಅದ್ಭುತಕರವಾದ ದೃಶ್ಯವನ್ನು ನೋಡಿರಿ. ಇದು ಸಹ ತನ್ಸಾನಿಯದ್ದಾಗಿದೆ. ಸಮೂಯೆ ಎಂಬ ಸ್ಥಳದ ಮುಅಲ್ಲಿಂ ಸಾಹಿಬ್‌ರು ಬರೆಯುತ್ತಾರೆ: ನಾಲ್ಕನೇ ತರಗತಿಯಲ್ಲಿ ಕಲಿಯುವ ಮೂರು ವಿದ್ಯಾರ್ಥಿಗಳು ಜಮಾಅತಿನಲ್ಲಿ ಇದ್ದಾರೆ. ತಅ್‌ಲೀಂ ಮತ್ತು ತರ್‌ಬಿಯತ್ ಕ್ಲಾಸಿಗಾಗಿ ಅವರು ನಿಯತವಾಗಿ ಮಸೀದಿಗೆ ಬರುತ್ತಾರೆ. ಮೂರೂ ಮಕ್ಕಳ ಮನೆಯವರು ಆರ್ಥಿಕವಾಗಿ ಬಡವರು ಆಗಿದ್ದಾರೆ. ಸ್ಥಿರವಾದ ಯಾವುದೇ ಆದಾಯ ಅವರಿಗೆ ಇಲ್ಲ. ಕಳೆದ ತಿಂಗಳಿಂದ ಅವರು ಪರಸ್ಪರ ಸ್ಪರ್ಧಿಸುತ್ತಿದ್ದರು. ತಹ್ರೀಕ್ ಜದೀದಿನ ಚಂದಾ ಪಾವತಿಸುವುದಕ್ಕೆ ಸಂಬಂಧಿಸಿ ಸ್ಪರ್ಧಿಸುತ್ತಿದ್ದರು. ಪ್ರತಿಯೊಬ್ಬರೂ ಏಕಾಂಗಿಯಾಗಿ ತಮ್ಮ ಚಂದವನ್ನು ಪಾವತಿಸುತ್ತಿದ್ದರು. ಅವರ ಬಳಿ ಇರುವಷ್ಟು ಹಣವನ್ನು ಪಾವತಿಸಲು ಪ್ರಯತ್ನಿಸುತ್ತಿದ್ದರು. ಹೀಗೆ ಅವರಲ್ಲಿ

ಒಬ್ಬನು ಐನ್ನೂರು, ಮತ್ತೊಬ್ಬನು ನಾನ್ನೂರು, ಮತ್ತೊಬ್ಬನು ಏಳುನೂರು ಶಿಲಿಂಗ್, ಹೀಗೆ ಅವರ ಬಳಿಯಿದ್ದ ಹಣವನ್ನು ನೀಡುತ್ತಿದ್ದರು. ನೀವು ತಹ್ರೀಕ್ ಜದೀದಿಗಾಗಿ ಕೊಡಲು ಈ ಹಣವನ್ನು ಎಲ್ಲಿಂದ ತರುತ್ತಿದ್ದೀರಿ ಎಂದು ಒಮ್ಮೆ ಮುಅಲ್ಲಿಂ ಸಾಹಿಬ್‌ರು ಆ ಮಕ್ಕಳೊಡನೆ ಕೇಳಿದರು. ಒಬ್ಬನು ಹೇಳಿದನು: ಕಾಡಿನಿಂದ ಮರವನ್ನು ಕಡಿಯಲಿಕ್ಕಾಗಿ ನನ್ನ ತಾಯಿಯೊಂದಿಗೆ ಸಹಾಯಕ್ಕಾಗಿ ಹೋಗುತ್ತೇನೆ. ಆಗ ಜೇಬುಖರ್ಚಿಗಾಗಿ ಹಣ ಸಿಗುತ್ತದೆ ಅದರಿಂದ ತಹ್ರೀಕ್ ಜದೀದ್ ಚಂದಾಗಾಗಿ ಇರಿಸುತ್ತೇನೆ. ಚಂದಾ ನೀಡಲು ಶುರುಮಾಡಿದ ಅಂದಿನಿಂದ ಮರವನ್ನು ಖರೀದಿ ಮಾಡಲು ಬೇಗನೇ ಗ್ರಾಹಕರು ಲಭ್ಯವಾಗುತ್ತಾರೆ. ಎಂದಿಗೂ ನಷ್ಟವಾಗುತ್ತಿರಲಿಲ್ಲ. ಮತ್ತೊಬ್ಬ ಹುಡುಗ ಹೇಳಿದನು: ನಾನು ಸಹ ತನ್ನ ಜೇಬು ಖರ್ಚಿನಿಂದ ಚಂದಾಗಾಗಿ ಹಣವನ್ನು ಬೇರೆಯಾಗಿರಿಸುತ್ತೇನೆ. ಮೂರನೆಯ ಹುಡುಗ ಹೇಳಿದನು: ನನ್ನ ಮನೆಯ ಸಮೀಪದ ಮರಗಳಲ್ಲಿ ಹಣ್ಣುಗಳು ಇರುತ್ತವೆ. ತಿಂದ ನಂತರ, ಹೆಚ್ಚಿಗೆಯಾಗಿ ಉಳಿಯುವ ಹಣ್ಣುಗಳನ್ನು ಮಾರಾಟ ಮಾಡುತ್ತೇನೆ. ಅದರಿಂದ ಲಭಿಸುವ ಹಣದಿಂದ ಚಂದಾವನ್ನು ಪಾವತಿಸುತ್ತೇನೆ. ಚಂದಾ ಪಾವತಿಯ ಕಾರಣದಿಂದ ಅವರಿಗೆ ಜೀವಿತದಲ್ಲಿ ಅನುಭವವಾಗುತ್ತಿರುವ ನೆಮ್ಮದಿಯ ಬಗ್ಗೆ ಆ ಮೂವರು ಮಕ್ಕಳು ಹೇಳುತ್ತಾ ಚಂದಾದ ಅನುಗ್ರಹಗಳನ್ನು ವಿವರಿಸಿದರು. ಅಲ್ಲಾಹನು ಈ ಮಕ್ಕಳ ವಿಶ್ವಾಸ ಮತ್ತು ನಿಷ್ಠೆಯನ್ನು ವರ್ಧಿಸುತ್ತಾ ಹೋಗಲಿ. ಇದಾಗಿದೆ ವಿಶ್ವಾಸ. ಅದರಿಂದ ನಮ್ಮ ಮಕ್ಕಳು ಸಹ ರುಚಿಯನ್ನು ಅನುಭವಿಸುತ್ತಾರೆ. ಜನರಲ್ಲಿ ಉಂಟಾಗುತ್ತಿರುವ ಪರಿವರ್ತನೆ ಇದಾಗಿದೆ.

ಲೋಕದ ಇನ್ನೊಂದು ಮೂಲೆಯಿಂದ ಇನ್ನೊಂದು ಉದಾಹರಣೆಯನ್ನು ನೋಡಿರಿ. ಲೋಕದ ಬೇರೆ ಬೇರೆ ಮೂಲೆಗಳು. ಆದರೂ ಎಲ್ಲ ಯೋಚನೆಗಳು ಒಂದೇ ಆಗಿವೆ. ಬೇಲೀಸ್‌ನ ಮುಬಲ್ಲಿಗ್ ಇಂಚಾರ್ಜ್ ಬರೆಯುತ್ತಾರೆ: ಬೇಲೀಸ್‌ನಲ್ಲಿ ಹದಿನಾಲ್ಕು ವಯಸ್ಸಿನ ಒಬ್ಬ ಹುಡುಗ, ಮಸೀದಿ ನಿರ್ಮಾಣದ ವೇಳೆ ತಾನು ಕೂಡಿ ಇಟ್ಟಿದ್ದ ಎಲ್ಲ ಹಣವನ್ನು ಮಸೀದಿಗಾಗಿ ಸಮರ್ಪಿಸಿದನು. ಅವನು ತಹ್ರೀಕ್ ಜದೀದಿನಲ್ಲೂ ತ್ಯಾಗದ ಉನ್ನತ ಮಾದರಿಯನ್ನು ತೋರಿಸಿದನು. ಅವನು ಬಹಳ ಬಡ ಮನೆತನದವನಾಗಿರುವನು. ಕಷ್ಟದಿಂದ ಅವರ ತಂದೆ ಮನೆಯ ಆವಶ್ಯಕತೆಗಳನ್ನು ಪೂರೈಸುತ್ತಾರೆ. ತಹ್ರೀಕ್ ಜದೀದಿನ ಪ್ರಾಮುಖ್ಯತೆಯ ಬಗ್ಗೆ ಮುಬಲ್ಲಿಗ್ ಸಾಹಿಬ್‌ರು ಹೇಳಿದಾಗ, ಹುಡುಗನು ಒಂದು ಡಾಲರ್ ನೀಡಿ ಹೀಗೆ ಹೇಳಿದನು: ಇದು ನನ್ನ ಮನೆಯವರ ವತಿಯಿಂದಾಗಿದೆ. ಮುರಬ್ಬಿ ಸಾಹಿಬ್‌ರು ಬಹಳ ಸಂತೋಷಗೊಂಡರು. ಏಕೆಂದರೆ, ಅವರ ಆರ್ಥಿಕ ಪರಿಸ್ಥಿತಿಯಲ್ಲಿ ಅಷ್ಟು ಧನತ್ಯಾಗ ಮಾಡುವುದು ಕೂಡ ಬಹಳ ದೊಡ್ಡ ಸಂಗತಿಯಾಗಿತ್ತು. ಆದರೆ ಹುಡುಗನಾದ ದಾನಿಯಲ್ ಹೇಳಿದನು: ನನ್ನ ಹೆಸರನ್ನು ಬರೆಯಬೇಡಿರಿ, ಇದನ್ನು ನಾನು ಮನೆಯವರ ವತಿಯಿಂದ ನೀಡಿದ್ದೇನೆ. ನನ್ನ ಪಾಲನ್ನು ಮತ್ತೆ ಕೊಡುತ್ತೇನೆ. ಹೀಗೆ ಮರುದಿನ ಆ ಹುಡುಗನು 10 ಡಾಲರ್ ತನ್ನ ವತಿಯಿಂದ ನೀಡಿದನು ಮತ್ತು ಹೀಗೆ ಹೇಳಿದನು: ಅಲ್ಲಾಹನು ನಮ್ಮ ಮನೆಯವರನ್ನು ಖಂಡಿತ ಅನುಗ್ರಹಿಸುವನು ಎಂದು ನನಗೆ ದೃಢವಿಶ್ವಾಸವಿದೆ.

ಹೊಸದಾಗಿ ಭಾಗಿಯಾಗುವವರ ಹೃದಯಗಳಲ್ಲಿ ತ್ಯಾಗದ ಆವೇಶವನ್ನು ಅಲ್ಲಾಹನು ಹೇಗೆ ಉಂಟುಮಾಡುತ್ತಾನೆ ಎಂದು ಮತ್ತು ಅವರನ್ನು ಹೇಗೆ ಅನುಗ್ರಹಿಸುತ್ತಾನೆ ಎಂದು ನೋಡಿರಿ. ಈ ಕುರಿತು ಮರಾಕಿಶಿನ ಒಬ್ಬ ಸಹೋದರರನಾದ ನೂರುದ್ದೀನ್ ಸಾಹಿಬ್ ಹೇಳುತ್ತಾರೆ: 2017ರಲ್ಲಿ ಬೈಅತ್ ಮಾಡಿದ ನಂತರ ಧನತ್ಯಾಗದಲ್ಲಿ ಭಾಗಿಯಾಗಲು ಶುರುಮಾಡಿದೆನು. ಆ ಸಮಯದಲ್ಲಿ ನನ್ನ ಆದಾಯ ಬಹಳ ಕಡಿಮೆಯಾಗಿತ್ತು. ಒಂದು ದಿನ ಜಮಾಅತಿನ ವೆಬ್‌ಸೈಟಿನಲ್ಲಿ ಖುತ್ಬ ಕೇಳಿದೆನು. ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬರ ಮತ್ತು ಅಹ್ಮದಿಯರ ಧನತ್ಯಾಗದ ಬಗ್ಗೆ ಖುತ್ಬದಲ್ಲಿ ಹೇಳಲಾಗಿತ್ತು. ಇದರಿಂದ ನನ್ನ ಹೃದಯದಲ್ಲಿ ಒಂದು ಆವೇಶ ಉಂಟಾಯಿತು. ಕೆಲವು ದಿನಗಳ ನಂತರ, ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಲು ಬಯಸುತ್ತೇನೆ ಎಂದು ನಾನು ಮರಾಕಿಶ್ ಜಮಾಅತಿನ ಸದರ್‌ನೊಡನೆ ಹೇಳಿದೆನು. ಅವರು ಕೆಲವು ಶರತ್ತುಗಳು ಮತ್ತು ಕರ್ತವ್ಯಗಳ ಬಗ್ಗೆ ಹೇಳಿದರು. ಇದರಿಂದ ನನ್ನ ಆವೇಶ ಇನ್ನೂ ಹೆಚ್ಚಾಯಿತು ಮತ್ತು ವಸಿಯ್ಯತ್ ಮಾಡಿದೆನು. ಕೆಲವು ತಿಂಗಳುಗಳ ನಂತರ ನನ್ನ ಪರಿಸ್ಥಿತಿ ಸುಧಾರಣೆಗೊಂಡಿತು. ನನಗೆ ಒಂದು ಕಂಪನಿಯಲ್ಲಿ ಒಳ್ಳೆಯ ಸಂಬಳವಿರುವ ನೌಕರಿ ಸಿಕ್ಕಿತು. ಈಗ ಇದೇ ಕಂಪನಿಯಲ್ಲಿ ಬೇರೊಂದು ಪಟ್ಟಣದಲ್ಲಿ ಮ್ಯಾನೆಜರಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಬಳ ಮೂರು ತಿಂಗಳಲ್ಲಿ ಮೂರು ಪಟ್ಟು ವರ್ಧಿಸಿದೆ. ಕಂಪನಿಗೆ ನನ್ನ ಮೇಲೆ ಎಷ್ಟು ಭರವಸೆಯುಂಟಾಯಿತು ಎಂದರೆ, ನಾನು ಮರಾಕಿಶಿನ ರಾಜಧಾನಿಯಿಂದ ಬೇರೊಂದು ಪಟ್ಟಣಕ್ಕೆ ಹೋಗಲು ತಯಾರಾದಾಗ, ನನ್ನೊಡನೆ ಮ್ಯಾನೇಜರ್ ಹೇಳಿದರು: ನಿನ್ನ ಹಾಗೆ ಕೆಲಸ ಮಾಡುವ ಯಾವನೇ ಅಹ್ಮದಿಗೆ ನೌಕರಿಯ ಆವಶ್ಯಕತೆಯಿದ್ದರೆ ಹೇಳು. ಇದನ್ನು ಕೇಳಿ ನಾನು ಬಹಳ ಭಾವುಕನಾದೆನು ಮತ್ತು ನನಗೆ ಕಣ್ಣೀರು ಬಂತು. ನಾನು ಪಟ್ಟಣದ ಒಬ್ಬ ಅಹ್ಮದೀ ಸಹೋದರನೊಡನೆ ಮಾತನಾಡಿದೆ. ಅವರಿಗೆ ಈ ನೌಕರಿ ಸಿಕ್ಕಿತು. ಅವರನ್ನು ಸಹ ಈಗ ಮ್ಯಾನೆಜರನ್ನಾಗಿ ಮಾಡಲಾಗಿದೆ. ಚಂದಾ ನೀಡುವುದರಿಂದ ನನಗೆ ನನ್ನ ಕುಟುಂಬದ ಕಡೆಯಿಂದ ಒತ್ತಡವಿದೆ ಮತ್ತು ಕೆಲವು ನನ್ನ ಸಂಬಂಧಿಕರು ನನ್ನನ್ನು ಅಪಹಾಸ್ಯ ಮಾಡುತ್ತಾರೆ. ಆದರೆ ಚಂದಾ ನೀಡುವುದರಿಂದ ನನಗೆ ಎಂದಿಗೂ ಆರ್ಥಿಕ ಕಷ್ಟತೆಯನ್ನು ಎದುರಿಸಬೇಕಾಗಿ ಬಂದಿಲ್ಲ ಎಂಬುದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ.

ಆಸ್ಟ್ರೇಲಿಯದ ಮುರಬ್ಬಿ ಸಾಹಿಬ್‌ರು ಬರೆಯುತ್ತಾರೆ: ಪರ್ಥಿನ ಒಬ್ಬ ಯುವಕನು ಈ ವರ್ಷ ತಹ್ರೀಕ್ ಜದೀದಿನ ಚಂದಾವನ್ನು ಸಂದಾಯ ಮಾಡಿರಲಿಲ್ಲ. ಚಂದಾ ನೀಡುವುದರ ಕಡೆಗೆ ಅವನ ಗಮನ ಸೆಳೆಯಲಾದಾಗ, ಅವನು ಹೇಳಿದನು: ಕೋವಿಡ್ ಕಾರಣದಿಂದ ಕೆಲಸವಿಲ್ಲ. ಆರ್ಥಿಕ ಸಂಕಷ್ಟದಲ್ಲಿದ್ದೇನೆ. ಆದರೆ ಕೆಲವು ದಿನಗಳ ನಂತರ ಪುನಃ ಭೇಟಿಯಾದನು. ಅವನು ಹೇಳಿದನು: ನಾನು ನನ್ನ ಚಂದಾವನ್ನು ಪಾವತಿ ಮಾಡಲಿಕ್ಕಾಗಿ ಮನೆಯ ಕೆಲವು ಮಾರಾಟ ಮಾಡಿದೆನು. ನಾನು ಹಾಗೆ ಮಾಡಿದಾಗ, ಕೆಲವೇ ದಿನಗಳಲ್ಲಿ ಕೆಲಸವಾಗಿ ನನಗೆ ನಾಲ್ಕು ಕಾಂಟ್ರಾಕ್ಟ್ ಲಭಿಸಿತು. ಅದರೊಂದಿಗೆ ಒಂದು ಹೊಸ ನೌಕರಿ ಸಹ ಸಿಕ್ಕಿತು. ಅವರ ಆದಾಯ ಕೂಡ ತುಂಬ ಅಧಿಕವಾಯಿತು. ಇದು ಅಲ್ಲಾಹನ ಅನುಗ್ರಹವಾಗಿದೆ ಎಂದು ನಾನು ನೋಡಿದೆನು. ಮನೆಯ ಸಾಮಾನುಗಳನ್ನು ಮಾರಾಟ ಮಾಡಿ ಚಂದಾ ನೀಡಿದಾಗ ಅಲ್ಲಾಹನು ಬೇಗನೇ ಅದನ್ನು ಮರಳಿಸಿದನು.

ಆಸ್ಟ್ರೇಲಿಯದ ಒಂದು ಪಟ್ಟಣದ ತಹ್ರೀಕ್ ಜದೀದಿನ ಸೆಕ್ರಟರಿ ಹೇಳುತ್ತಾರೆ: ಒಬ್ಬ ನಿಷ್ಠಾವಂತ ಸಹೋದರನ ತಹ್ರೀಕ್ ಜದೀದಿನ ಚಂದಾ ಬಾಕಿಯಿತ್ತು. ಅವರ ಗಮನವನ್ನು ಸೆಳೆಯಲಾದಾಗ, ಅವರು ಹೇಳಿದರು: ನಾನು ನನ್ನ ಮನೆಯನ್ನು ಮಾರಾಟ ಮಾಡಲಿದ್ದೇನೆ. ಮನೆ ಮಾರಾಟವಾದ ತಕ್ಷಣವೇ ಚಂದಾ ನೀಡುವೆನು. ಎರಡು ದಿನಗಳ ನಂತರ ಅವರ ಫೋನ್ ಬಂತು. ಅಲ್ಲಾಹನ ಅನುಗ್ರಹದಿಂದ ನನ್ನ ಮನೆಯು ನಾನು ಊಹಿಸದಷ್ಟು ಲಾಭದಲ್ಲಿ ಮಾರಾಟವಾಗಿದೆ. ಚಂದಾ ಪಾವತಿಯ ವಾಗ್ದಾನದ ಕಾರಣದಿಂದ ಹೀಗೆ ಆಯಿತು ಎಂದು ಅವರಿಗೆ ದೃಢವಿಶ್ವಾಸವಿತ್ತು. ಹೀಗೆ ಅವರು ಆರು ಪಟ್ಟು ವರ್ಧಿಸಿ ತಮ್ಮ ತಹ್ರೀಕ್ ಜದೀದಿನ ಚಂದಾವನ್ನು ಪಾವತಿಸಿದರು. ಅಲ್ಲಾಹನು ಲೌಕಿಕವಾದ ಲಾಭದಿಂದ ಅನುಗ್ರಹಿಸುವಾಗಲೂ, ಇದು ನನ್ನ ಯಾವುದೇ ಸಾಮರ್ಥ್ಯದಿಂದ ಲಭಿಸಿದಲ್ಲ, ಬದಲಾಗಿ ತ್ಯಾಗದ ಕಾರಣದಿಂದ ಲಭಿಸಿದೆ ಎಂದು ಒಬ್ಬ ಅಹ್ಮದಿ ಅರಿಯುತ್ತಾನೆ. ಇದು ಅಹ್ಮದಿಯರ ಯೋಚನೆಯಾಗಿದೆ. ಬೇರೆ ಯಾರಿಗೂ ಇಂತಹ ಯೋಚನೆ ಬರಲು ಸಾಧ್ಯವಿಲ್ಲ.

ಅರ್ಜಂಟಿನದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ: ನಾನು ಧನತ್ಯಾಗದ ಬಗ್ಗೆ ಜನರ ಗಮನ ಸೆಳೆಯಲಿಕ್ಕಾಗಿ ಒಂದು ಲೇಖನವನ್ನು ಬರೆದೆನು. ಧನತ್ಯಾಗ ಒಂದು ಧಾರ್ಮಿಕ ಆವಶ್ಯಕತೆಯಾಗಿದೆ. ನಿಮಗೆ ಲಭಿಸಿರುವ ಅಹ್ಮದಿಯ್ಯತ್ ತಹ್ರೀಕ್ ಜದೀದಿನಲ್ಲಿ ಧನತ್ಯಾಗ ಮಾಡಿದವರ ಕಾರಣದಿಂದ ಲಭಿಸಿದೆ, ಆದ್ದರಿಂದ ತಮ್ಮ ಜೀವನವನ್ನು ಸುಂದರಗೊಳಿಸಲು ಮತ್ತು ಈ ಸಂದೇಶವನ್ನು ತಲುಪಿಸುವವರಾಗಲು ಈ ಯೋಜನೆಯಲ್ಲಿ ಭಾಗಿಯಾಗಿರಿ ಎಂದು ನವ ಅಹ್ಮದಿಯರೊಡನೆ ಹೇಳಬೇಕು ಎಂದು ನಾನು ಖುತ್ಬದಲ್ಲಿ ಹೇಳಿದ ಮಾತನ್ನು ಆ ಲೇಖನದಲ್ಲಿ ಸೇರಿಸಲಾಗಿತ್ತು. ಈ ಉಲ್ಲೇಖವನ್ನು ಅವರು ನನ್ನ ಖುತ್ಬದಿಂದ ತೆಗೆದು ಲೇಖನವನ್ನು ಪ್ರಕಟಿಸಿದ್ದರು. ಈ ಲೇಖನವನ್ನು ಜಮಾಅತಿನ ಸಹೋದರರಿಗೆ ತಲುಪಿಸಿದಾಗ ಒಬ್ಬ ಯುವಕನಾದ ಅನಸ್ ಇಝ್‌ಕೀಲ್ ಸಾಹಿಬ್‌ರು ನನ್ನನ್ನು ಸಂಪರ್ಕಿಸಿದರು ಮತ್ತು ಹೀಗೆ ಹೇಳಿದರು: ನಾನು ತಹ್ರೀಕ್ ಜದೀದಿನ ಚಂದಾವನ್ನು ಪಾವತಿಸಲಿಕ್ಕಾಗಿ ಮಿಶನ್ ಹೌಸಿಗೆ ಬರಲು ಬಯಸುತ್ತೇನೆ. ಕಠಿಣ ಸೆಖೆಯಿದ್ದೂ ಸ್ಕೂಲ್ ಬಿಟ್ಟ ನಂತರ ಬೇಗನೇ ಪಬ್ಲಿಕ್ ಬಸ್‌ನಲ್ಲಿ ಒಂದು ಗಂಟೆಗಿಂತ ಹೆಚ್ಚಿನ ಯಾತ್ರೆಯನ್ನು ಮಾಡಿ ಮಿಶನ್ ಹೌಸಿಗೆ ಬಂದರು. ಒಂದು ಸಾವಿರ ಅರ್ಜಂಟೈನ್ ಪೆಸೋವನ್ನು ತಹ್ರೀಕ್ ಜದೀದಿಗಾಗಿ ಅರ್ಪಿಸಿದರು. ಮುಬಲ್ಲಿಗ್ ಸಾಹಿಬ್‌ರು ಹೇಳುತ್ತಾರೆ: ನನಗೆ ಬಹಳ ಆಶ್ಚರ್ಯವಾಯಿತು. ಅವರ ಆರ್ಥಿಕ ಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲ ಮತ್ತು ಅವರು ಸ್ಕೂಲಿನ ವಿದ್ಯಾರ್ಥಿಯಾಗಿದ್ದರು. ಅವರಿಗೆ ಯಾವುದೇ ಆದಾಯದ ಮಾರ್ಗವೂ ಇರಲಿಲ್ಲ. ಕುಟುಂಬದ ಸ್ಥಿತಿಯು ಅಷ್ಟು ಉತ್ತಮವಲ್ಲ. ಹಣದ ಕೊರತೆಯ ಕಾರಣದಿಂದ ಆ ಯುವಕನು ಮಧ್ಯಾಹ್ನದ ಊಟ ಕೂಡ ಮಾಡಿರಲಿಲ್ಲ. ಕೇಳಿದಾಗ ಆ ಯುವಕನು ಹೇಳಿದನು: "ನವ ಅಹ್ಮದಿಯರು ಸಹ ತಹ್ರೀಕ್ ಜದೀದಿನಲ್ಲಿ ಭಾಗಿಯಾಗಬೇಕು ಏಕೆಂದರೆ, ಅವರಿಗೆ ಅಹ್ಮದಿಯ್ಯತಿನ ಸಂದೇಶವು ತಹ್ರೀಕ್

ಜದೀದಿನ ಮೂಲಕ ತಲುಪಿದೆ" ಎಂಬ ಖ಼ಲೀಫತುಲ್ ಮಸೀಹರ ಉಲ್ಲೇಖ ನನ್ನ ಹೃದಯದಲ್ಲಿ ವಿಶೇಷವಾದ ಪ್ರಭಾವ ಉಂಟುಮಾಡಿತ್ತು. ಒಂದೆಡೆ ನಾನು ಈ ಉಲ್ಲೇಖವನ್ನು ಓದಿದೆ. ಮತ್ತೊಂದೆಡೆ ಶಹೀದರನ್ನು ಮೃತರೆಂದೂ ಮತ್ತು ಅವರ ತ್ಯಾಗಗಳನ್ನು ವ್ಯರ್ಥವೆಂದೂ ಭಾವಿಸಬೇಡ, ಅವರು ಸದಾ ಜೀವಂತವಾಗಿರುವವರು ಎಂಬ ಪವಿತ್ರ ಖುರ್‌ಆನಿನ ವಚನವನ್ನು ಓದಿದೆನು. ನನ್ನ ಮರಣದ ನಂತರವೂ ಅದರ ಪ್ರಯೋಜನ ಮತ್ತು ಅದರ ಪರಿಣಾಮ ಬಾಕಿಯುಳಿವಂತಹ ತ್ಯಾಗವನ್ನು ಮಾಡಲು ನನ್ನ ಮನಸ್ಸಲ್ಲಿ ಬಯಕೆ ಉಂಟಾಯಿತು. ನನ್ನ ಅಹ್ಮದಿಯೇತರ ಕುಟುಂಬದವರು ನನ್ನ ಹುಟ್ಟುದಿನದಂದು ಸ್ವಲ್ಪ ಹಣವನ್ನು ಕೊಡುಗೆಯಾಗಿ ನೀಡಿದ್ದರು. ಆ ಹಣದಲ್ಲಿ ನನ್ನ ಬಳಿಯಿದ್ದದ್ದನ್ನು ಪೂರ್ಣವಾಗಿ ತಹ್ರೀಕ್ ಜದೀದಿಗೆ ಅರ್ಪಿಸಿದೆ. ನನಗೆ ಅಹ್ಮದಿಯ್ಯತ್ತಿನ ಸಂದೇಶ ಲಭಿಸಿದ ಹಾಗೆಯೇ ಇತರರಿಗೂ ಅಹ್ಮದಿಯ್ಯತ್ತಿನ ಸಂದೇಶ ತಲುಪಲು ಹಾಗೆ ಮಾಡಿದೆ. ಅಹ್ಮದಿಯ್ಯತ್ ಸ್ವೀಕಾರದ ನಂತರ ಜನರೊಳಗೆ ಕ್ರಾಂತಿಕಾರಿಯಾದ ಬದಲಾವಣೆಗಳು ಉಂಟಾಗುತ್ತವೆ.

ಅಹ್ಮದಿಯ್ಯಾ ಜಮಾಅತ್ ಹಣವನ್ನು ಹೇಗೆ ಮತ್ತು ಎಲ್ಲೆಲ್ಲ ಖರ್ಚು ಮಾಡುತ್ತದೆ ಎಂದು ಹೊಸ ಅಹ್ಮದಿಯರು ಮತ್ತು ಹಳೆಯ ಅಹ್ಮದಿಯರು ಆಲಿಸುವಾಗ ಅದರ ಒಂದು ವಿಶೇಷ ಪ್ರಭಾವ ಉಂಟಾಗುತ್ತದೆ. ಈ ಕಡೆ ಗಮನ ಕಡಿಮೆಯಿರುವ ಜಮಾಅತ್‌ಗಳು ಈ ಕುರಿತು ಗಮನಹರಿಸಿರಿ. ಜನರಿಗೆ ಚಂದಾದ ಉದ್ದೇಶ, ಮತ್ತು ಪ್ರಾಮುಖ್ಯವನ್ನು ಹೇಳಿಕೊಡಿರಿ. ಹೀಗಾದರೆ ಅವರ ಚಂದಾ ವರ್ಧನೆಯಾಗಬಹುದು.

ಲೈಬೀರಿಯದ ಒಂದು ಘಟನೆಯಿದೆ. ಅಲ್ಲೊಂದು ಜಮಾಅತ್ ಇದೆ. ಅಲ್ಲಿ ಹೆಚ್ಚಾಗಿ ನವಅಹ್ಮದಿಯರು ಇರುವರು. ಅಲ್ಲಿಯ ಜನರು ಕ್ರೈಸ್ತ ಧರ್ಮದಿಂದ ಇಸ್ಲಾಮಿಗೆ ಪ್ರವೇಶಿಸಿದ್ದರು. ಅಲ್ಲಿಯ ಮುಅಲ್ಲಿಂ ಸಾಹಿಬ್‌ರಾದ ಮುರ್ತಝ಼ಾ ಸಾಹಿಬ್ ಹೇಳುತ್ತಾರೆ; ತಹ್ರೀಕ್ ಜದೀದಿಗೆ ಸಂಬಂಧಿಸಿ ನಾನು ಒಂದು ಜಮಾಅತಿಗೆ ಹೋಗಿದ್ದೆನು. ಆ ಗ್ರಾಮಕ್ಕೆ ತಲುಪಿದಾಗ ಮಧ್ಯಾಹ್ನದ ಸಮಯವಾಗಿತ್ತು. ಹೆಚ್ಚಿನವರು ಹೊರಗೆ ತಮ್ಮ ಕೃಷಿಭೂಮಿಗಳಲ್ಲಿ ಕೆಲಸ ಮಾಡಲು ಹೋಗಿದ್ದರು. ನಾನು ಅಲ್ಲೇ ತಂಗುವೆನು ಎಂದು ನಾನು ಅಲ್ಲಿದ್ದ ಜನರೊಡನೆ ಹೇಳಿದೆನು. ಶೇಕಡ ನೂರರಷ್ಟು ಜನರು ತಹ್ರೀಕ್ ಜದೀದಿನ ಅನುಗ್ರಹೀತ ಯೋಜನೆಯಲ್ಲಿ ಭಾಗಿಯಾಗುವ ತನಕ ಮರಳಿ ಹೋಗುವುದಿಲ್ಲ ಎಂದು ಅವರೊಡನೆ ಹೇಳಿದೆನು. ರಾತ್ರಿ ಸಮಯದಲ್ಲಿ ಜನರು ಕೆಲಸ ಮುಗಿಸಿ ಗ್ರಾಮಕ್ಕೆ ಬಂದಾಗ, ಮುಅಲ್ಲಿಂ ಸಾಹಿಬ್‌ರು ಜಮಾಅತಿನ ಎಲ್ಲ ಸದಸ್ಯರ ಮುಂದೆ ತಹ್ರೀಕ್ ಜದೀದಿನ ಮಹತ್ತಾದ ಯೋಜನೆಯ ಹಿನ್ನೆಲೆ ಮತ್ತು ಪ್ರಾಮುಖ್ಯತೆಯ ಬಗ್ಗೆ ವಿವರಿಸಿದರು. ಎಲ್ಲರೊಡನೆ ಅದರಲ್ಲಿ ಭಾಗಿಯಾಗಲು ಹುರಿದುಂಬಿಸಿದರು. ಅಲ್ಲಾಹನ ಅನುಗ್ರಹದಿಂದ ಎಲ್ಲ ಪುರುಷರು ಮತ್ತು ಸ್ತ್ರೀಯರು ಉತ್ಸಾಹದಿಂದ ತಹ್ರೀಕ್ ಜದೀದ್‌ನಲ್ಲಿ ಭಾಗಿಯಾದರು. ಮರುದಿನ ಬೆಳಿಗ್ಗೆ ಮರಳಿ ಹೋಗುವಾಗ ಒಬ್ಬ ವ್ಯಕ್ತಿ ಹೇಳಿದರು: ಅಲ್‌ಫಾನ್ಸೋ ಸಾಹಿಬ್ ಎಂಬ ಒಬ್ಬ ಸಹೋದರನಿದ್ದಾನೆ. ಅವರು ಎರಡು ತಿಂಗಳುಗಳಿಂದ ಹೊರಗೆ ಕೃಷಿಭೂಮಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ತಹ್ರೀಕ್ ಜದೀದಿನಲ್ಲಿ ಭಾಗಿಯಾಗಿಲ್ಲ. ಆದರೆ ನೀವು ಅವರ ಬಳಿಗೆ ತಲುಪಲು ಸಾಧ್ಯವೂ ಇಲ್ಲ. ಏಕೆಂದರೆ ಅವರ ಕೃಷಿಭೂಮಿ ಬಹಳ ದೂರದಲ್ಲಿದೆ. ಮಾತ್ರವಲ್ಲ, ಮಳೆಯ ಕಾರಣದಿಂದ ರಸ್ತೆ ಕೂಡ ಬಂದಾಗಿದೆ. ಮುಅಲ್ಲಿಂ ಸಾಹಿಬ್‌ರು ಹೇಳಿದರು: ನಾನು ಅವರ ಬಳಿಗೂ ತಲುಪುತ್ತೇನೆ. ನಿಮ್ಮ ಜಮಾಅತಿನ ಶೇಕಡ ನೂರರಷ್ಟು ಸದಸ್ಯರು ಈ ಯೋಜನೆಯಲ್ಲಿ ಭಾಗಿಯಾಗಬೇಕು. ಜಮಾಅತಿನ ಸಹೋದರರು ಅಲ್ಲಿಗೆ ಹೋಗಬೇಡಿರಿ ಎಂದು ಹೇಳಿದರು. ಆದರೆ ಹೋಗುವುದಾಗಿ ಮುಅಲ್ಲಿಂ ಸಾಹಿಬ್‌ರು ಹೇಳಿದರು. ಹೇಗಿದ್ದರೂ ಕೆಲವು ಸಹೋದರರು ಅವರ ಜೊತೆಗೆ ಹೋದರು. ಎರಡುವರೆ ಗಂಟೆಗಳ ಕಾಲ್ನಡಿಗೆಯ ಯಾತ್ರೆಯ ನಂತರ ಅವರು ಅಲ್‌ಫಾನ್ಸೋ ಸಾಹಿಬ್‌ರ ಬಳಿಗೆ ತಲುಪಿದಾಗ ಅವರಿಗೂ ಆಶ್ಚರ್ಯವಾಯಿತು ಸಂತೋಷವೂ ಆಯಿತು. ಅವರು ಬೇಗನೇ ತಹ್ರೀಕ್ ಜದೀದಿನ ಚಂದಾವನ್ನು ಪಾವತಿಸಿದರು. ಅಲ್ಫಾನ್ಸೋ ಸಾಹಿಬ್‌ರ ಪತ್ನಿ ಮಕ್ಕಳು ಸಹ ಅವರೊಡನೆ ತಂಗಿದ್ದರು. ಪತ್ನಿ ಆಗ ಅಹ್ಮದಿಯಾಗಿರಲಿಲ್ಲ. ಈ ಎಲ್ಲ ದೃಶ್ಯವನ್ನು ನೋಡಿದಾಗ ಅವರ ಪತ್ನಿ ಹೇಳಿದರು: ನಾನು ಅಹ್ಮದಿಯ್ಯರ ಧಾರ್ಮಿಕ ಸೇವೆಯ ಆವೇಶವನ್ನು ನೋಡಿ ಪ್ರಭಾವಿತಳಾಗಿದ್ದೇನೆ. ಆದ್ದರಿಂದ ನಾನು ಕೂಡ ಈ ಜಮಾಅತಿನಲ್ಲಿ ಪ್ರವೇಶಿಸುತ್ತೇನೆ. ನನ್ನ ಮಕ್ಕಳು ಕೂಡ ಈ ಜಮಾಅತಿಗೆ ಸೇರುವರು. ಹೀಗೆ ಅದರ ಅನುಗ್ರಹದಿಂದ ಒಂದು ಕುಟುಂಬಕ್ಕೆ ಅಹ್ಮದಿಯ್ಯತ್ತಿಗೆ ಸೇರುವ ಸೌಭಾಗ್ಯ ಲಭಿಸಿತು.

ಬೈಅತ್ ಮಾಡಿದ ನಂತರ, ಧನತ್ಯಾಗ ಮಾಡುವುದು ಎಷ್ಟು ಆವಶ್ಯಕವೆಂಬ ಅರಿವು ಜನರಿಗೆ ಆಗುತ್ತದೆ ಎಂಬುದರ ಒಂದು ಉದಾಹರಣೆ ಹೀಗಿದೆ: ಮಾಲಿಯಿಂದ ಮುಬಲ್ಲಿಗ್ ಬರೆಯುತ್ತಾರೆ: ಒಂದು ರೀಜನಿನಲ್ಲಿ ಸೈದೂ ಸಾಹಿಬ್ ಎಂಬ ಒಬ್ಬ ಸಹೋದರನಿದ್ದಾನೆ. ಅವರು ಕೀತಾದ ಅಹ್ಮದಿಯಾ ಮಿಶನ್ ಹೌಸಿಗೆ ಬಂದರು. ಅವರು ಹೀಗೆ ಹೇಳುತ್ತಾ ತಹ್ರೀಕ್ ಜದೀದಿನ ಚಂದಾವನ್ನು ಪಾವತಿಸಿದರು: ತಹ್ರೀಕ್ ಜದೀದಿನ ವರ್ಷ ಮುಕ್ತಾಯವಾಗುತ್ತಿತ್ತು. ನಾನು ಅನೇಕ ದಿನಗಳಿಂದ ಚಿಂತಿತನಾಗಿದ್ದೆನು. ತಹ್ರೀಕ್ ಜದೀದಿನ ವಾಗ್ದಾನವನ್ನು ಈಡೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ ಎಂದು ನಾನು ಪ್ರಾರ್ಥಿಸುತ್ತಿದ್ದೆನು. ಇಂದು ಅಲ್ಲಾಹನು ನನಗೆ ಅದರ ಸೌಭಾಗ್ಯ ನೀಡಿದ್ದಾನೆ. ಆದ್ದರಿಂದ ನಾನು ಇಲ್ಲಿಗೆ ಬಂದಿದ್ದೇನೆ. ಅವರು ಒಂದು ಕಾಲಿಗೆ ಅಂಗವೈಕಲ್ಯವಿತ್ತು. ನೀವೇಕೆ ಇಲ್ಲಿಗೆ ಬಂದಿದ್ದೀರಿ, ತಿಳಿಸಿದ್ದರೆ ನಾವೇ ನಿಮ್ಮ ಬಳಿಗೆ ಬರುತ್ತಿದ್ದೆವು ಎಂದು ಅವರೊಡನೆ ಹೇಳಲಾದಾಗ ಅವರು ಬಹಳ ಆವೇಶದಿಂದ ಹೇಳಿದರು: ನಾನು ಇಮಾಂ ಮಹ್‌ದಿಯನ್ನು ನಂಬಿದ್ದೇನೆ. ಬಾಹ್ಯವಾದ ಶಾರೀರಿಕ ದೌರ್ಬಲ್ಯವಿದ್ದರೂ ನಾನು ನನ್ನನ್ನು ಆರೋಗ್ಯವಂತ ಜನರಿಗಿಂತ ಉತ್ತಮನೆಂದು ಭಾವಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ನನಗೆ ದೀನಿನ ಬಗ್ಗೆ ಕಳವಳ ಮತ್ತು ನೋವು ಇದೆ. ಇಂತಹ ಸ್ಥಿತಿಯಲ್ಲಿ ನಾನು ಕಾಲ್ನಡಿಗೆಯಾಗಿ ಧರ್ಮದ ಒಳಿತಿಗಾಗಿ ಬರುವುದರಿಂದ ನಾನು ಅಲ್ಲಾಹನ ಸನ್ನಿಧಿಯಲ್ಲಿ ಬಹುಶಃ ಸ್ವೀಕಾರಾರ್ಹನಾಗುವೆನು ಮತ್ತು ಇದು ಅಲ್ಲಾಹನು ನನ್ನನ್ನು ಕ್ಷಮಿಸಲು ಕಾರಣವಾಗಲೂ ಬಹುದು.

ಬೆನಿನ್‌ನ ಲೋಕಲ್ ಮುಅಲ್ಲಿಮ್‌ರಾದ ಮೋತೋ ವಾಮಾಅ ಹೇಳುತ್ತಾರೆ: ತನ್ನ ಝ಼ೋನಿನಲ್ಲಿ ಇರುವ ನವ ಅಹ್ಮದಿಯರ ಒಂದು ಜಮಾಅತಿಗೆ ಹೋಗಿದ್ದೆನು. ಅಲ್ಲಿಯ ಜಮಾಅತ್ ಸದರ್ ಆದ ಇಸ್ಮಾಈಲ್ ಸಾಹಿಬ್‌ರು ಹೇಳಿದರು: ನಾನು ಆರಂಭದಿಂದಲೇ ಮುಸ್ಲಿಮರು. ಯಾವಾಗಲೂ ಪ್ರತಿ ವರ್ಷವು ಏನಾದರೂ ಧನತ್ಯಾಗ ಅಲ್ಲಾಹನ ಮಾರ್ಗದಲ್ಲಿ ನಮ್ಮ ನೇತಾರರಿಗೆ ಕೊಡುತ್ತಾ ಬಂದಿದ್ದೇವೆ. ಅಹ್ಮದಿಯಾಗಿ ಇದು ಮೊದಲ ವರ್ಷವಾಗಿದೆ. ಮೊದಲ ಬಾರಿಗೆ ನಾವು ಅಹ್ಮದಿಯಾ ಜಮಾಅತಿನಲ್ಲಿ ಧನತ್ಯಾಗ ಮಾಡಿದ್ದೇವೆ. ಇದಕ್ಕಿಂತ ಮುಂಚೆ ನಮ್ಮ ನೇತಾರನಗೆ ಕೊಡುವ ಹಣವನ್ನು ಅವರೇ ಉಪಯೋಗಿಸುತ್ತಿದ್ದರು. ಆದರೆ ನಾವು ಅಹ್ಮದಿಯಾ ಜಮಾಅತಿಗೆ ಮುಬಲ್ಲಿಗ್‌ರ ಮೂಲಕ ಧನತ್ಯಾಗ ಮಾಡಿದಾಗ ಅದನ್ನು ಹೇಗೆ ಉಪಯೋಗಿಸಲಾಗುತ್ತದೆ ಎಂದು ನಾವು ಕೇಳಿದ್ದೆವು. ಅದರಿಂದ ಮಾಡಲಾಗುವ ಮಹತ್ತಾದ ಕೆಲಸಗಳ ಬಗ್ಗೆ, ಅದನ್ನು ಉಪಯೋಗಿಸಲಾಗುವ ರೀತಿಯ ಬಗ್ಗೆ ಅವರು ನಮಗೆ ಹೇಳಿಕೊಟ್ಟರು. ನಾವು ಕೊಡುವ ಮಾಮೂಲಿ ಹಣವನ್ನು ಕೂಡ ಅಹ್ಮದಿಯಾ ಜಮಾಅತ್ ವ್ಯರ್ಥ ಮಾಡುವುದಿಲ್ಲ. ಬದಲಾಗಿ ಈ ಮಾಮೂಲಿ ಹಣವನ್ನು ಸಹ ಲೋಕದೆಲ್ಲಡೆ ನಡೆಯುವ ಜನಸೇವೆ ಮತ್ತು ಜನಕ್ಷೇಮದ ಕೆಲಸಕ್ಕಾಗಿ ಹಾಗು ಇಸ್ಲಾಮಿನ ಪ್ರಚಾರಕ್ಕಾಗಿ ಉಪಯೋಗಿಸುತ್ತದೆ. ಕೆಲವು ಪೈಸೆಗಳನ್ನು ಚಂದಾವಾಗಿ ನೀಡುವವನು ಕೂಡ ಅತ್ಯುತ್ತಮ ಪ್ರತಿಫಲವನ್ನು ಪಡೆಯುತ್ತಾನೆ. ಹೀಗೆ ತ್ಯಾಗದ ಈ ತತ್ವವನ್ನು ಅರಿತುಕೊಂಡು ನಾವು ತಹ್‌ರೀಕ್ ಜದೀದಿಗಾಗಿ ಚಂದಾ ನೀಡಿದ್ದೆವು. ಈ ವರ್ಷ ನಮ್ಮ ಮನೆಗಳಲ್ಲಿ ಆರ್ಥಿಕ ಸಂಕಷ್ಟ ಕೂಡ ಬಂದಿಲ್ಲವೆಂದು ನಮಗೆ ಅನುಭವವಾಯಿತು. ನಮ್ಮ ಮತ್ತು ನಮ್ಮ ಮಕ್ಕಳ ಆರೋಗ್ಯಕ್ಕಾಗಿ ನಮಗೆ ಈ ವರ್ಷ ಖರ್ಚು ಮಾಡಬೇಕಾಗಿ ಬಂದಿಲ್ಲ. ನಮ್ಮ ನಮಾಝಿ಼ನ ಹಾಜರಿ ಮೊದಲಿಗಿಂತ ಉತ್ತಮವಾಯಿತು. ಅಲ್ಲಾಹನು ನಮ್ಮನ್ನು ಸಂರಕ್ಷಿಸಿದನು. ಅಲ್ಲಾಹನ ಅನುಗ್ರಹದಿಂದ ಧನತ್ಯಾಗದ ನಂತರ ನಮ್ಮ ತ್ಯಾಗಗಳು ವ್ಯರ್ಥವಾಗಲಿಲ್ಲವೆಂದು ಅರಿತು ನಮಗೆ ಮನಸ್ಸಮಾಧಾನ ಮತ್ತು ನೆಮ್ಮದಿಯಿತ್ತು. ಆಫ್ರಿಕದ ದೂರ ಪ್ರದೇಶಗಳಲ್ಲಿ ಇರುವ ಅವಿದ್ಯಾವಂತರಿಗೆ ವಿವೇಕವೇ ಇಲ್ಲವೆಂದು ಜನರು ಹೇಳುತ್ತಾರೆ. ಆದರೆ ಇದು ಎಂತಹ ಪಕ್ವವಾದ ಯೋಚನೆ ಮತ್ತು ಉನ್ನತವಾದ ಚಿಂತನೆಯೆಂದರೆ, ದೊಡ್ಡ ದೊಡ್ಡ ವಿದ್ಯಾವಂತರು ಹೀಗೆ ಯೋಚಿಸಿಯೇ ಇರುವುದಿಲ್ಲ. ಎಲ್ಲ ಸಂಗತಿಯನ್ನು ಅವರು ಎಷ್ಟು ಉತ್ತಮವಾಗಿ ವಿವರಿಸಿರುವರು ಎಂದು ನೋಡಿರಿ. ಧನತ್ಯಾಗದ ಪ್ರಾಮುಖ್ಯತೆಯನ್ನು ಅವರು ಎಷ್ಟು ಚೆನ್ನಾಗಿ ಅರಿತುಕೊಂಡಿದ್ದಾರೆ ಎಂದು ನೋಡಿರಿ. ಬೈಅತ್ ಮಾಡಿದ ನಂತರ ಜನರಲ್ಲಿ ಉಂಟಾಗುವ ಅದ್ಭುತಕರವಾದ ಪರಿವರ್ತನೆ, ಬದಲಾವಣೆ ಇದಾಗಿದೆ.

ಅಲ್ಲಾಹನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಇಸ್ಲಾಮಿನ ಪ್ರಚಾರಕ್ಕಾಗಿ ತ್ಯಾಗಮಾಡಲು ಸೌಭಾಗ್ಯ ನೀಡಲಿ ಮತ್ತು ತಮ್ಮ ಪರಿಶುದ್ಧ ಆದಾಯಗಳಿಂದ ತ್ಯಾಗ ಮಾಡುವವರನ್ನಾಗಿ ಮಾಡಲಿ. ಅಲ್ಲಾಹನ ಸನ್ನಿಧಿಯಲ್ಲಿ ಈ ತ್ಯಾಗಗಳು ಸ್ವೀಕಾರಾರ್ಹವಾಗಲಿ ಮತ್ತು ಅಲ್ಲಾಹನು ನಮ್ಮೊಡನೆ ಸಂಪ್ರೀತನಾಗಲಿ.

ತಹ್ರೀಕ್ ಜದೀದಿನ ಘೋಷಣೆಯೊಂದಿಗೆ ಸ್ವಲ್ಪ ವಿವರವನ್ನು ವಿವರಿಸುತ್ತೇನೆ. ಅಲ್ಲಾಹನ ಅನುಗ್ರಹದಿಂದ ತಹ್ರೀಕ್ ಜದೀದಿನ 87ನೇ ವರ್ಷ ಅಕ್ಟೋಬರ್ 31ಕ್ಕೆ ಕೊನೆಗೊಂಡಿದೆ ಮತ್ತು 88ನೇ ವರ್ಷ

ಶುರುವಾಗಿದೆ. ಅಲ್ಲಾಹನ ಅನುಗ್ರಹದಿಂದ ತಹ್ರೀಕ್ ಜದೀದಿನ ಸಾಂಪತ್ತಿಕ ವ್ಯವಸ್ಥೆಯಲ್ಲಿ, 15.3 ಮಿಲಿಯನ್ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿದೆ. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 52 ಸಾವಿರ ಪೌಂಡ್‌ನಷ್ಟು ಅಧಿಕವಿದೆ.

ಲೋಕದ ಜಮಾಅತುಗಳಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಪಾಕಿಸ್ತಾನದಲ್ಲಿ ಆರ್ಥಿಕ ಸ್ಥಿತಿ ಬಹಳ ಕೆಟ್ಟು ಹೋಗಿದೆ. ತ್ಯಾಗಗಳಲ್ಲಿ ಮುಂದಿರುತ್ತಾರೆ. ಅವರಿಗಾಗಿಯೂ ದುಆ ಮಾಡಿರಿ. ಅಲ್ಲದೆಯೂ ಈಗ ಅವರು ಕಷ್ಟತೆಗಳಿಗೆ ಗುರಿಯಾಗಿರುವರು. ಪ್ರತಿದಿನ ಯಾವುದಾದರೂ ಮೊಕದ್ದಮೆಗಳು ನಡೆಯುತ್ತಿರುತ್ತವೆ. ಕಾನೂನು ಸಹ ಅವರನ್ನು ಸಾಧ್ಯವಾಗುವಷ್ಟು ತೊಂದರೆಗೆ ಗುರಿಪಡಿಸಲು ಪ್ರಯತ್ನಿಸುತ್ತದೆ. ಅಲ್ಲಾಹನು ಅಲ್ಲಾಹನು ಅವರ ಕಷ್ಟತೆಗಳನ್ನು ದೂರಮಾಡಲಿ. ಅವರಿಗೂ ಸಹ ಸ್ವತಂತ್ರವಾಗಿ ತಮ್ಮ ಎಲ್ಲ ಕಾರ್ಯಗಳನ್ನು, ಇಜ್‌ತಿಮಗಳನ್ನು, ಜಲ್ಸಗಳನ್ನು ಮಾಡಲು ಸೌಭಾಗ್ಯ ಸಿಗಲಿ. ಅವರಿಗೂ ತ್ಯಾಗಗಳನ್ನು ಪ್ರಕಟಿಸಲು ಸಾಧ್ಯವಾಗಲಿ. ಅವರು ಅದನ್ನು ಪ್ರಕಟಿಸಲಿಕ್ಕಿಲ್ಲ. ಅವರ ತ್ಯಾಗಗಳನ್ನು ನಮಗೆ ಸ್ವತಂತ್ರವಾಗಿ ಹೇಳಲು ಸಾಧ್ಯವಾಗಲಿ. ಸ್ಥಿತಿಗತಿಗಳ ಕಾರಣದಿಂದ ಅವರ ಕೆಲವು ತ್ಯಾಗಗಳನ್ನು ಪ್ರಸ್ತಾಪಿಸಲು ಸಾಧ್ಯವಾಗುತ್ತಿಲ್ಲ.

ಹೇಗಿದ್ದರೂ ತ್ಯಾಗಮಾಡುವವರಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಅನಂತರ ಬ್ರಿಟನ್. ಅಮೇರಿಕಕ್ಕೆ ಮೂರನೇ ಸ್ಥಾನವಿದೆ. ಅನಂತರ ಕೆನಡ, ಅನಂತರ ಮಿಡಲ್ ಈಸ್ಟಿನ ಒಂದು ದೇಶವಿದೆ. ಅನಂತರ ಅನುಕ್ರಮವಾಗಿ ಭಾರತ, ಆಸ್ಟ್ರೇಲಿಯಾ, ಇಂಡೋನೇಶ್ಯ, ಘಾನ. ಅನಂತರ ಇನ್ನೊಂದು ಮಿಡಲ್ ಈಸ್ಟಿನ ಜಮಾಅತ್.

ಆಫ್ರಿಕನ್ ದೇಶಗಳಲ್ಲಿ ಒಟ್ಟು ವಸೂಲಿಯ ದೃಷ್ಟಿಯಲ್ಲಿ ಮೊದಲ ಪೊಸಿಶನ್ ಘಾನದ್ದಾಗಿದೆ, ನಂತರ ಅನುಕ್ರಮವಾಗಿ ನೈಜೀರಿಯ, ಬುರ್ಕಿನಾಫಾಸೋ, ತನ್ಸಾನಿಯ, ಸಿರಲಿಯೋನ್, ಗೇಂಬಿಯ, ಬೆನಿನ್, ಯುಗಾಂಡ, ಕಿನ್ಯಾ ಮತ್ತು ಲೈಬೀರಿಯ. ನಾನು ಮೊದಲೇ ಹೇಳಿದಂತೆ ಸಿರಲಿಯೋನಿನಲ್ಲಿ ಇನ್ನಷ್ಟು ವಸೂಲಿ ಮಾಡಲು ಎಡೆಯಿದೆ. ಆದರೆ ನೀಡಬೇಕಾದ ಗಮನವನ್ನು ನೀಡಲಾಗುತ್ತಿಲ್ಲ. ಜನರಿಗೆ ಸರಿಯಾಗಿ ಹೇಳಿಕೊಟ್ಟರೆ, ಅಲ್ಲಿಯ ಜನರು ತ್ಯಾಗಮಾಡುವವರಾಗಿರುವರು. ನಾನು ಅದರ ಉದಾಹರಣೆಗಳನ್ನು ಸಹ ಮುಂದಿರಿಸಿದ್ದೇನೆ.

ಹೊಸ ಸೇರ್ಪಡೆಯಾದವರ ವರ್ಧನೆಯ ದೃಷ್ಟಿಯಲ್ಲಿ ನೈಜೀರಿಯಾಗೆ ಮೊದಲನೇ ಸ್ಥಾನ. ಅನಂತರ ಗೇಂಬಿಯ, ಸೆನಿಗಾಲ್, ಘಾನ, ತನ್ಸಾನಿಯ, ಗಿನಿಕನಾಕುರಿ, ಮಲಾವಿ, ಯುಗಾಂಡ, ಗನಿಬಸಾವು, ಕೋಂಗೋಕನ್ಸಾಶಾ, ಬುರ್ಕಿನಾಫಾಸೋ, ಕೋಂಗೋಬರಾಝ್‌ವೀಲ್. ಇತರ ದೊಡ್ಡ ದೇಶಗಳಲ್ಲಿ ಹೊಸ ಸೇರ್ಪಡೆಯಾದವರಲ್ಲಿ ಮೊದಲ ಸ್ಥಾನ ಜರ್ಮನಿ, ಅನಂತರ ಅನುಕ್ರಮವಾಗಿ ಜರ್ಮನಿ, ಬ್ರಿಟನ್, ಹಾಲೇಂಡ್, ಬಾಂಗ್ಲದೇಶ್, ಮೊರಿಶಿಯಸ್. ದಫ್ತರ್ ಅವ್ವಲಿನ ಎಲ್ಲ ಖಾತೆಗಳು ಅಲ್ಲಾಹನ ಅನುಗ್ರಹದಿಂದ ಜಾರಿಯಲ್ಲಿವೆ.

ಜರ್ಮನಿಯ ಮೊದಲ ಹತ್ತು ಜಮಾಅತುಗಳು ಹೀಗಿವೆ: ರೋಡರ್‌ಮಾರ್ಕ್, ನೋಯಿಸ್, ಮಹ್‌ದೀ ಆಬಾದ್, ಕೋಲೋನ್, ರೋಡ್‌ಗೋ, ನೇಡ, ಫ್ಲೋರಸ್‌ಹಾಇಮ್, ಗನಿಬರ್ಗ್, ಫ್ರಂಕಂಥಾಲ್, ಓಸನ್‌ಬರ್ಗ್. ಲೋಕಲ್ ಇಮಾರಾತುಗಳು ಹೀಗಿವೆ: ಹೇಂಬರ್ಗ್, ಫ್ರಾಂಕ್‌ಫರ್ಟ್, ಗ್ರೋಸ್‌ಗೇರಾವು, ಡಟ್‌ಸನ್‌ಬಾಖ್, ವೀಝ್‌ಬಾದನ್, ಮೋರ್‌ಫಿಲ್‌ಡನ್, ಏಡಿಸ್ಪಡ್, ಮನ್‌ಹಾಯಿಮ್, ಡಾಮಸ್‌ಟಡ್, ರೇಡ್‌ಶಟಡ್, ರಸಲ್ಹಾಇಮ್.

ಪಾಕಿಸ್ತಾನದಲ್ಲಿ ತಹ್ರೀಕ್ ಜದೀದಿನ ಧನತ್ಯಾಗದ ವಸೂಲಿಯ ದೃಷ್ಟಿಯಲ್ಲಿ ಮೊದಲ ಸ್ಥಾನ ಲಾಹೋರಿಗಿದೆ. ಅನಂತರ ಅನುಕ್ರಮವಾಗಿ ರಬ್ವ, ಕರಾಚಿ. ಜಿಲ್ಲಾ ಮಟ್ಟದಲ್ಲಿ ಹೆಚ್ಚಿನ ತ್ಯಾಗಗಳನ್ನು ಮಾಡಿದ ಜಿಲ್ಲೆಗಳ ಹೆಸರು ಹೀಗಿವೆ: ಇಸ್ಲಾಮಾಬಾದ್, ಗೋಜ್‌ರನ್‌ವಾಲ, ಸಿಯಾಲ್‌ಕೋಟ್, ಉಮರ್‌ಕೋಟ್, ಮುಲ್ತಾನ್, ಗುಜ್‌ರಾತ್, ಟೂಬ ಟೇಕ್‌ಸಿಂಗ್, ಮೀರ್‌ಪೂರ್‌ಖಾಸ್, ಅಟಕ್, ಮೀರ್‌ಪೂರ್, ಆಝಾದ್ ಕಶ್ಮೀರ್, ಡೇರಾಘಾಸಿ ಖಾನ್.

ವಸೂಲಿಯ ದೃಷ್ಟಿಯಲ್ಲಿ ಹೆಚ್ಚು ತ್ಯಾಗಮಾಡುವ ಇಮಾರತ್ ಜಮಾಅತ್‌ಗಳು, ಡಿಫೆನ್ಸ್ ಲಾಹೋರ್, ಇಮಾರತ್ ಗುಲ್‌ಶನ್ ಆಬಾದ್ ಕರಾಚಿ, ಇಮಾರತ್ ಅಝೀಝಾಬಾದ್ ಕರಾಚಿ, ಇಮಾರತ್ ಟೌನ್‌ಶಿಪ್ ಲಾಹೋರ್, ಇಮಾರತ್ ಮಾಡೆಲ್ ಟೌನ್ ಲಾಹೋರ್, ಇಮಾರತ್ ಮುಗಲ್‌ಪೂರ ಲಾಹೋರ್, ಇಮಾರತ್ ದೆಹಲಿ ಗೇಟ್ ಲಾಹೋರ್, ಇಮಾರತ್ ಕ್ಲಿಫ್ಟನ್ ಕರಾಚಿ, ಬಹಾವ್‌ಲಂಗರ್ ಶಹರ್, ಹಾಫಿಝಾಬಾದ್ ಶಹರ್.

ಬ್ರಿಟನಿನ ಮೊದಲ ಐದು ರೀಜನ್‌ಗಳು ಹೀಗಿವೆ: ಮಸ್ಜಿದ್ ಬೈತುಲ್ ಫುತೂಹ್ ರೀಜನ್, ಮಸ್ಜಿದ್ ಫಝ್ಲ್ ರೀಜನ್, ಇಸ್ಲಾಮಾಬಾದ್ ರೀಜನ್, ಮಿಡ್‌ಲೇಂಡ್ ರೀಜನ್, ಬೈತುಲ್ ಎಹ್‌ಸಾನ್ ರೀಜನ್, ಒಟ್ಟು ಸಂದಾಯದ ಪ್ರಕಾರಕ ಬ್ರಿಟನಿನ ಹತ್ತು ಜಮಾಅತುಗಳು ಹೀಗಿವೆ: ಫಾರನ್‌ಹಾಮ್, ಇಸ್ಲಾಮಾಬಾದ್ ರೀಜನ್, ಸೌತ್‌ಚೀನ್, ಮಸ್ಜಿದ್ ಫಝ್ಲ್, ವೋಸ್ಟರ್ ಪಾರ್ಕ್, ಬರ್ಮಿಂಗ್‌ಹಮ್ ಸೌತ್, ವಾಲ್ಸ್‌ಹಾಲ್ ಆಲ್ಟರ್‌ಶಾರ್ಟ್, ಜಿಲಂಘಮ್, ಟಿಲ್‌ಫೋರ್ಡ್.

ಅಮೇರಿಕದ ಜಮಾಅತುಗಳಲ್ಲಿ ಒಟ್ಟು ವಸೂಲಿಯ ದೃಷ್ಟಿಯಲ್ಲಿ ಮೊದಲ ಸ್ಥಾನ ಮೇರಿಲೇಂಡ್‌ಗಿದೆ. ಅನಂತರ ಅನುಕ್ರಮವಾಗಿ ಲಾಸ್‌ಏಂಜಲೀಸ್, ಡಟ್‌ರಾಯಿಟ್, ಸಿಲಿಕೋನ್ ವೇಲಿ, ಶಿಕಾಗೋ ಸೇಟಲ್, ಸೆಂಟ್ರಲ್ ವರ್ಜೀನಿಯಾ, ಆಶ್‌ಕಾಶ್, ಅಟ್ಲಾಂಟ, ಜಾರ್ಜೀಯ, ಸೌತ್ ವರ್ಜೀನಿಯಾ, ಹೋಸ್ಟನ್ ಯಾರ್ಕ್ ಮತ್ತು ಬೋಸ್ಟನ್.

ಒಟ್ಟು ವಸೂಲಿನ ದೃಷ್ಟಿಯಲ್ಲಿ ಕೆನಡದ ಪ್ರಾದೇಶಿಕ ಇಮಾರತ್‌ಗಳಲ್ಲಿ, ಮೊದಲು ವಾನ್, ಅನಂತರ ಅನುಕ್ರಮವಾಗಿ ಪೀಸ್ ವಿಲೇಜ್ ಮತ್ತು ಕೇಲ್‌ಗರಿ ಒಂದೇ ಸ್ಥಾನದಲ್ಲಿವೆ, ವೇಂಕೋವರ್, ಟೋರಂಟೋ ವೆಸ್ಟ್, ಟೋರಂಟೋ.

ಭಾರತದ ಹತ್ತು ಜಮಾಅತುಗಳ ಹೆಸರುಗಳು ಹೀಗಿವೆ: ಖಾದಿಯಾನಿಗೆ ಮೊದಲನೇ ಸ್ಥಾನವಿದೆ. ಅನಂತರ ಅನುಕ್ರಮವಾಗಿ ಕೋಯಂಬತೂರ್, ಹೈದರಾಬಾದ್, ಕರುಳಾಯಿ, ಪತ್ತಪಿರಿಯಂ, ಕೋಲ್ಕತ್ತ, ಬೆಂಗಳೂರು, ಕೇರಂಗ್, ಕಾಲಿಕಟ್, ಮತ್ತು ಮೇಲಪಾಲಯಂ.

ತ್ಯಾಗದ ದೃಷ್ಟಿಯಲ್ಲಿ ಮೊದಲ ಹತ್ತು ಸ್ಥಾನದಲ್ಲಿರುವ ರಾಜ್ಯಗಳು ಹೀಗಿವೆ: ಕೇರಳ ಮೊದಲ ಸ್ಥಾನದಲ್ಲಿದೆ, ಅನಂತರ ಅನುಕ್ರಮವಾಗಿ ತಮಿಳುನಾಡು, ಜಮ್ಮು ಕಾಶ್ಮೀರ, ಕರ್ನಾಟಕ, ತೆಲಂಗಾಣ, ಒಡಿಶಾ, ಪಂಜಾಬ್, ಬಂಗಾಳ, ದೆಹಲಿ ಮತ್ತು ಲಕ್ಷದ್ವೀಪ.

ಆಸ್ಟ್ರೇಲಿಯಾದ ಮೊದಲ ಹತ್ತು ಜಮಾಅತುಗಳು ಹೀಗಿವೆ: ಮೆಲ್ಬರ್ನ್, ಲಾಂಗ್‌ವಾರನ್, ಕಾಸಲ್‌ಹಿಲ್, ಮಾರ್ಸ್ಡನ್ ಪಾರ್ಕ್, ಮೆಲ್ಬರ್ನ್ ಬೇರೂಕ್, ಏಡಿಲಾಯ್ಡ್ ಸೌತ್, ಪೀನ್‌ರಥ್, ಪರ್ಥ್ ಎಸಿಟಿ ಕೇಂಬ್ರ, ಪೀರಾಮಾಟ, ಏಡಿಲಾಯ್ಡ್ ವೆಸ್ಟ್.

ತ್ಯಾಗಮಾಡಿದ ಎಲ್ಲರ ಸಂಪತ್ತು ಮತ್ತು ಸಂತಾನಗಳ ಮೇಲೆ ಅಲ್ಲಾಹನು ಅನುಗ್ರಹ ಸುರಿಸಲಿ.

**********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಪದದ ಮೂಲಕ ಪಾದರಿಯರೊಡನೆ ಸೇಡು ತೀರಿಸಿಕೊಂಡ. ಏಕೆಂದರೆ ಕ್ರೈಸ್ತ ಮಿಷಿನರಿಗಳು ಮರಿಯಮನ ಪುತ್ರನನ್ನು ದೇವನನ್ನಾಗಿ ಮಾಡಿದ್ದಾರೆ. ಮತ್ತು ನಮ್ಮ ನೇತಾರ, ನಿಜವಾದ ಮುಕ್ತಿದಾಯಕನನ್ನು ಬಯ್ದಿದ್ದಾರೆ. ಮತ್ತು ಗ್ರಂಥಗಳಲ್ಲಿ ಅಶ್ಲೀಲ ಭಾಷೆಯನ್ನು ಬಳಸಿ ಭೂಮಿಯನ್ನು ಅಪವಿತ್ರಗೊಳಿಸಿದ್ದಾರೆ.

ಆ ಮಸೀಹನ ಹೆಸರು ದೇವನೆಂದು ಇಟ್ಟಿದ್ದೀರಿ. ಅದರ ಎದುರು ಅಲ್ಲಾಹನು ಈ ಸಮುದಾಯದಲ್ಲಿ ವಾಗ್ದತ್ತ ಮಸೀಹನನ್ನು ಕಳುಹಿಸಿರುವನು. ಅವನು ಆ ಮೊದಲ ಮಸೀಹನಿಗಿಂತ ಎಲ್ಲಾ ರೀತಿಯಲ್ಲಿ ಮಹೋನ್ನತನಾಗಿದ್ದಾನೆ, ಅವನು ಈ ಎರಡನೆಯ ಮಸೀಹನ ಹೆಸರು "ಗುಲಾಂ ಅಹ್ಮದ್" ಎಂದಿಟ್ಟಿರುವನು. ಏಕೆಂದರೆ ಆ ಮಸೀಹನು ಎಂತಹ ದೇವನಾಗಿದ್ದ ಎಂದು ಕ್ರೈಸ್ತರು ತಿಳಿದುಕೊಳ್ಳಲು. ಅವನು ಅಹ್ಮದನ ಗುಲಾಮನನ್ನು ಸಹ ಎದುರಿಸುವ ಶಕ್ತಿ ಹೊಂದಿಲ್ಲ ಅದರೆ ಅವನು ಎಂತಹ ಮಸೀಹನು ತನ್ನ ಸಾನಿಧ್ಯ ಮತ್ತು ಮುಕ್ತಿಯ ಸ್ಥಾನದಲ್ಲಿ ಅಹ್ಮದನ ಗುಲಾಮನಿಗಿಂತ ಕೀಳಾಗಿರುವನು. ಓ ಪ್ರಿಯರೇ! ಇದು ಸಿಟ್ಟಾಗುವ ಮಾತಲ್ಲ, ಈ ಅಹ್ಮದನ ಗುಲಾಮನನ್ನು ವಾಗ್ದತ್ತ ಮಸಿಹನಾಗಿ ಕಳುಹಿಸಿರುವನು. ಅವರನ್ನು ನೀವು ಮೊದಲ ಮಸೀಹರಿಗಿಂತ ಕೀಳು ಎಂದು ಭಾವಿಸುವಿರಾದರೆ, ಅವನನ್ನೇ ಮುಕ್ತಿದಾಯಕನೆಂದು ಭಾವಿಸುವಿರಾದರೆ ಇದೀಗ ತಮ್ಮ ದಾವೆಯ ಪರವಾಗಿ ಸಾಕ್ಷ್ಯಗಳನ್ನು ನೀಡಿರಿ. (ದಾಫಿಉಲ್ ಬಲಾ, ರೂಹಾನಿ ಖಝಾಇನ್, ಸಂಪುಟ-18, ಪುಟ-233)

ನನ್ನ ಪವಾಡಗಳ ಮುಂದೆ ಲೋಕದ ಯಾವ ಪ್ರವಾದಿಯದ್ದಾಗಲಿ ಅಥವಾ ಸಜ್ಜನರದ್ದಾಗಲಿ ಪವಾಡಗಳನ್ನು ಪ್ರಸ್ತುತಪಡಿಸಿರಿ! ನೀವು ಪ್ರಯತ್ನಪಡುತ್ತ ಸತ್ತು ಹೋದರು. ಪ್ರಸ್ತುತಪಡಿಸಲಾರಿರಿ.

ಪ್ರಸ್ತುತದಲ್ಲಿ ಹಿಂದಿನ ಪ್ರವಾದಿಗಳಿಗಿಂತ ಯಥೇಚ್ಛ ಪವಾಡಗಳು ಮತ್ತು ಭವಿಷ್ಯವಾಣಿಗಳು ಇವೆ. ಅಲ್ಲದೇ ಹಿಂದಿನ ಕೆಲ ಪ್ರವಾದಿಗಳಿಗಿಂತ ಅವರ ಪವಾಡಗಳಿಗೆ ಮತ್ತು ಭವಿಷ್ಯವಾಣಿಗಳಿಗೆ ಅನುಪಾತದಲ್ಲಿ ಯಾವ ಸಂಭಂಧವೂ ಇಲ್ಲ. ಅಲ್ಲದೇ ಅವರ ಭವಿಷ್ಯವಾಣಿಗಳು ಮತ್ತು ಪವಾಡಗಳು ಆ ಕಾಲದಲ್ಲಿ ಕೇವಲ ಕಥೆ ಕಾದಂಬರಿಯಂತಾಗಿವೆ. ಆದರೆ ಈ ಪವಾಡಗಳು ಮತ್ತು ಭವಿಷ್ಯವಾಣಿಗಳು ಸಾವಿರಾರು ಜನರ ಸಾಕ್ಷ್ಯ ಸಹಿತ ಕಣ್ಣು ಮುಂದಿದೆ. ಬಹಳ ಉನ್ನತವಾದ ದರ್ಜೆ ಹೊಂದಿವೆ. ಅಂದರೆ ಸಾವಿರಾರು ಮನುಷ್ಯರು

ಅದರ ಸಾಕ್ಷಿಗಳಾಗಿದ್ದಾರೆ. ಆದರೆ ಹಿಂದಿನ ಪ್ರವಾದಿಗಳ ಪವಾಡಗಳಿಗೆ ಭವಿಷ್ಯವಾಣಿಗಳಿಗೆ ಒಬ್ಬನು ಸಹ ಜೀವಂತ ಸಾಕ್ಷಿಯಾಗಿ ಉಳಿದಿಲ್ಲ. ನಮ್ಮ ನೇತಾರ ನಬಿ(ಸ) ರವರನ್ನು ಹೊರತುಪಡಿಸಿ. ಅವರ ಪವಾಡಗಳಿಗೆ ಮತ್ತು ಭವಿಷ್ಯವಾಣಿಗಳಿಗೆ ನಾನು ಜೀವಂತ ಸಾಕ್ಷಿಯಾಗಿ ಪ್ರಸ್ತುತನಾಗಿದ್ದೇನೆ. ಪವಿತ್ರ ಖುರ್‌ಆನ್ ಜೀವಂತ ಸಾಕ್ಷಿಯಾಗಿದೆ. ನನ್ನ ಕೆಲ ಪವಾಡಗಳಿಗೆ ಭವಿಷ್ಯವಾಣಿಗಳಿಗೆ ಕೋಟ್ಯಾಂತರ ಜನರು ಸಾಕ್ಷಿಯಾಗಿದ್ದಾರೆ. ದ್ವೇಷವನ್ನು ಮಧ್ಯದಿಂದ ತೆಗೆದರೆ, ಯಾರಿರಬಹುದು ಅಷ್ಟೊಂದು ಸತ್ಯ ಘಟನೆಗಳನ್ನು ನೋಡಿಯೂ, ಸಾಕ್ಷ್ಯವಹಿಸಲಾರರು. ವಾಸ್ತವವಾಗಿಯೂ ಹಿಂದಿನ ಪ್ರವಾದಿಗಳಲಿ ಹೆಚ್ಚಿನವರ ಪವಾಡಗಳು ಮತ್ತು ಭವಿಷ್ಯವಾಣಿಗಳು ನನಗಿಂತ ಯಾವ ರೀತಿಯಲ್ಲೂ ಶಕ್ತಿಶಾಲಿಯಾಗಲಿ ಸಂಖ್ಯೆಯಲ್ಲಿ ಹೆಚ್ಚಾಗಲಿ ಇರಲಿಲ್ಲ. ಯಾವನಾದರೂ ಅಂಧನೊಬ್ಬ ನಿರಾಕರಿಸಿದರೆ, ನಾವು ಇದ್ದೇವೆ ಮತ್ತು ನಮ್ಮ ಸಾಕ್ಷಿದಾರರಿದ್ದಾರೆ, **"ವಲೈಸಲ್ ಖಬರು ಕಲ್ ಮುಆಯನತಿ"**.......ಕಥೆಗಳನ್ನು ನಿರೂಪಿಸುವುದೆಂದರೆ ಪರಿಮಳದ ಮುಂದೆ ಸಗಣಿ ಇಟ್ಟಂತೆ, ಆದರೆ ನೆನಪಿಡಿರಿ. ನನ್ನ ಕೈಮೇಲೆ ಪ್ರಕಟವಾದಂತಹ ಮತ್ತು ಪ್ರಕಟಗೊಳ್ಳುವಂತಹ ಪವಾಡಗಳು ಮತ್ತು ಭವಿಷ್ಯವಾಣಿಗಳು ಸಾಕ್ಷ್ಯದೊಂದಿಗೆ ಎಂದೂ ಸಹ ಪ್ರಯತ್ನಪಡುತ್ತ ಸತ್ತು ಹೋದದ್ದು ಪ್ರಕಟಿಸಲಾರಿರಿ. (ನೂರುಲ್ ಮಸೀಹ್, ರೂಹಾನಿ ಖಝಾಇನ್ ಸಂಪುಟ–18, ಪುಟ–460)

**ಮರಿಯಮನ ಪುತ್ರ ಮಸೀಹನು ನನ್ನ ಕಾಲಘಟ್ಟದಲ್ಲಿರುತ್ತಿದ್ದರೆ, ನಾನು ಮಾಡುವಂತಹ ಕೆಲಸಗಳನ್ನು ಎಂದಿಗೂ ಮಾಡಲು ಸಾಧ್ಯವಿರುತ್ತಿರಲಿಲ್ಲ.**

ನನಗೆ ತಿಳಿಯದ ವಿಷಯವೇನೆಂದರೆ ಬೇರೆಯವರಿಗಿಂತ ಮಸೀಹರಿಗೆ ಯಾವ ರೀತಿ ವಿಶೇಷತೆಯಿತ್ತು. ಅವರನ್ನು ದೇವರನ್ನಾಗಿ ಮಾಡುವ ಕಲ್ಪನೆ ಹೇಗೆ ಬಂದಿತು? ಎಷ್ಟೋ ಪ್ರವಾದಿಗಳು ಪವಾಡಗಳಲ್ಲಿ ಅವರಿಗಿಂತ ಮಿಗಿಲಾಗಿದ್ದರು. ಉದಾಹರಣೆಗೆ ಮೂಸಾ ಮತ್ತು ಅಲ್ ಯಸಅ ಮತ್ತು ಈಲಿಯಾ ಪ್ರವಾದಿ ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನಾಣೆ, ಮರಿಯಮನ ಪುತ್ರ ನನ್ನ ಕಾಲದಲ್ಲಿ ಇರುತ್ತಿದ್ದರೆ ನಾನು ಮಾಡಿದಂತಹ ಕಾರ್ಯಗಳು ಅವರಿಂದ ಎಂದೂ ಸಾಧ್ಯವಿರಲಿಲ್ಲ. ಅವರು ತನಗಿಂತ ನನ್ನ ಮೇಲೆಯೇ ಅಲ್ಲಾಹನ ಅನುಗ್ರಹಗಳನ್ನು ಕಾಣುತ್ತಿದ್ದರು. ನನಗೆ ಹೀಗಿದ್ದರೆ ಇನ್ನು ಯೋಚಿಸಿ. ಆ ಪವಿತ್ರ ನಬಿವರ್ಯರ ಸ್ಥಾನಮಾನ ಹೇಗಿರಬಹುದು. ಅವರ ಗುಲಾಮ ನಾನಾಗಿದ್ದೇನೆ. "ಝಾಲಿಕ್ ಫಝುಲ್ಲಾಹಿ ಯೂತಿಹಿ ಮಯಿಗಾವಿ.." ನನ್ನನ್ನು ಗುರುತಿಸಿರುವವನು ಸೌಭಾಗ್ಯವಂತನಾಗಿದ್ದಾನೆ. ಅಲ್ಲಾಹನ ಎಲ್ಲ ಮಾರ್ಗಗಳಲ್ಲಿ ನಾನು ಕೊನೆಯ ಮಾರ್ಗವಾಗಿದ್ದೇನೆ. ಮತ್ತು ಎಲ್ಲಾ ಪ್ರಕಾಶಗಳಲ್ಲಿ ನಾನು ಕೊನೆಯ ಪ್ರಕಾಶವಾಗಿದ್ದೇನೆ. ನನ್ನ ಕೈಬಿಡುವವನು ತುಂಬಾ ದೌರ್ಭಾಗ್ಯವಂತನು. ಏಕೆಂದರೆ ನನ್ನ ಹೊರತು ಎಲ್ಲವೂ ಅಂಧಕಾರವೇ ಆಗಿದೆ. (ಕಿಶ್ತಿ ಎ ನೂಹ್, ರೂಹಾನಿ ಖಝಾಇನ್, ಸಂಪುಟ–19, ಪುಟ–60)

ಆ ದೇವನ ಬಗ್ಗೆ ಯೇಸು ಹೇಳುವರು. ನನಗೆ ನೀನು ಏಕೆ ಕೈಬಿಟ್ಟಿರುವೆ ಎಂದು. ಆದರೆ ನಾನು ನೋಡುತ್ತಿದ್ದೇವೆ. ಅವನು ನನ್ನನ್ನು ಬಿಟ್ಟಿಲ್ಲ.

ನಾವು ಜೀವಂತವಲ್ಲದ ಧರ್ಮವನ್ನು ಪಡೆದು ಏನು ಮಾಡುವೆವು? ನಾವು ಜೀವವಿಲ್ಲದ ಗ್ರಂಥದಿಂದ ಯಾವ ರೀತಿಯ ಪ್ರಯೋಜನ ಪಡೆಯಲು ಸಾಧ್ಯ? ಮತ್ತು ಮೃತ ದೇವನಿಂದ ನಮಗೆ ಯಾವ ಲಾಭವಿದೆ.? ನನಗೆ ಆ ಅಲ್ಲಾಹನಾಣೆ. ಅವನ ಕೈಯಲ್ಲಿ ನನ್ನ ಜೀವವಿದೆ. ನಾನು ಆ ಪವಿತ್ರ ದೇವನಿಂದ ನಿಷ್ಕಳಂಕವಾದ ಸ್ವಚ್ಛವಾದ ಸಂಭಾಷಣೆಯನ್ನು ಪಡೆಯುವವನಾಗಿದ್ದೇನೆ. ಸುಮಾರು ದಿನದಿಂದ ಅವನ ಸಂಭಾಷಣೆಯಿಂದ ಅನುಗ್ರಹಿತನಾಗಿರುತ್ತೇನೆ. ಆ ದೇವನ ಬಗ್ಗೆ ಯೇಸು ಮಸೀಹ್ ಹೇಳಿದರು ನೀನು ನನ್ನ ಕೈ ಏಕೆ ಬಿಟ್ಟಿರುವೆ? ನಾನು ನೋಡುತ್ತಿದ್ದೇನೆ. ಅವನು ನನ್ನ ಕೈ ಬಿಟ್ಟಿಲ್ಲ. ನನಗಾಗಿ ಅವನು ಮಹತ್ತರವಾದ ಪವಾಡಗಳನ್ನು ತೋರಿಸಿರುವನು ಮತ್ತು ಸಾವಿರಾರು ದೃಷ್ಟಾಂತಗಳನ್ನು ಅವನು ನನಗೆ ತೋರಿಸಿಕೊಟ್ಟಿರುವನು. ಆ ದೇವನು ಪವಿತ್ರ ಖುರ್‌ಆನ್ ಇಳಿಸಿದ ದೇವನಾಗಿದ್ದಾನೆ. ಮತ್ತೆ ಅವನೇ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಕಳುಹಿಸಿರುವನು. ಏಸು ಮಸೀಹರಲ್ಲಿ ಈ ವಿಷಯದಲ್ಲಿ ನಾನು ಯಾವ ವಿಶೇಷತೆಯನ್ನೂ ಕಾಣುವುದಿಲ್ಲ. (ಚಷ್ಮಯೇ ಮಸೀಹಿ, ರೂಹಾನಿ ಖಝಾಇನ್, ಸಂಪುಟ–20, ಪುಟ–353)

**ಲೋಕ ಸುಧಾರಣೆಗೆ ಅನುಗುಣವಾಗಿ ವಾಗ್ದತ್ತ ಮಸೀಹರಿಗೆ ಶಕ್ತಿ ಹಾಗೂ ಬಲ ನೀಡಲಾಗಿದೆ.**

ಇಲ್ಲಿ ನೆನಪಿಡಬೇಕಾದ ವಿಷಯವೇನೆಂದರೆ ನನಗೆ ಲೋಕದ ಸುಧಾರಣೆಗೆ ಅನುಗುಣವಾಗಿ ಒಂದು ಕರ್ತವ್ಯ ಪ್ರಧಾನ ಮಾಡಲಾಗಿದೆ. ಕಾರಣವೇನೆಂದರೆ ನಮ್ಮ ನೇತಾರ ಮತ್ತು ಸರದಾರರು ಇಡೀ ಲೋಕಕ್ಕಾಗಿ ಆಗಮಿಸಿದ್ದರು. ಆ ಮಹೋನ್ನತ ಸೇವೆಯ ಪ್ರಯುಕ್ತ ನನಗೆ ಆ ಶಕ್ತಿಗಳನ್ನು ಮತ್ತು ಬಲಗಳನ್ನು ನೀಡಲಾಗಿದೆ. ಅದನ್ನು ಪಾಲಿಸುವುದು ಅನಿವಾರ್ಯವಾಗಿತ್ತು. ಅಂತೆಯೇ ನನಗೆ ಆ ಆಧ್ಯಾತ್ಮಿಕ ಜ್ಞಾನ ಮತ್ತು ದೃಷ್ಟಾಂತಗಳನ್ನು ಸಹ ನೀಡಲಾಯಿತು. ಅದು ನ್ಯಾಯಪೂರ್ತಿಕರಣದ ಉಚಿತ ಸಂದರ್ಭವಾಗಿತ್ತು. ಹಜ್‌ರತ್ ಈಸಾ(ಅ) ರವರಿಗೆ ಕೇವಲ ಒಂದು ಯಹೂದಿ ಸಮುದಾಯಕ್ಕೆ ಬೇಕಾಗುವ ಶಕ್ತಿ ಸಾಮರ್ಥ್ಯ ನೀಡಲಾಗಿತ್ತು. (ಹಖೀಖತುಲ್ ವಹಿ, ರೂಹಾನಿ ಖಝಾಇನ್, ಸಂಪುಟ–20,ಪುಟ–353)

**ಪವಾಡಗಳ ಸರೋವರವೇ ಜಾರಿಯಲ್ಲಿದೆ.**

ಹೌದು ಯಾರಾದರೂ ಇದೀಗ ಈ ಆಕ್ಷೇಪ ಎತ್ತಿ ಆರೋಪ ಮಾಡಿದರೆ ಆ ಪವಾಡಗಳು ಎಲ್ಲಿವೆ ಎಂದರೆ ನಾನು ಕೇವಲ ಪವಾಡಗಳನ್ನು ತೋರಿಸಬಲ್ಲೆ ಎಂದಷ್ಟೇ ಉತ್ತರ ನೀಡುವುದಿಲ್ಲ. ಬದಲು ಅಲ್ಲಾಹನು ತನ್ನ ಅನುಗ್ರಹ ಔದಾರ್ಯಗಳಿಂದ ನನ್ನ ವಾದ ಸಾಬೀತುಪಡಿಸಲು ಎಷ್ಟೊಂದು ಪವಾಡಗಳನ್ನು ತೋರಿಸಿದ್ದಾನೆಂದರೆ, ಆ ರೀತಿಯ ಪವಾಡಗಳನ್ನು ತೋರಿಸುವಂತಹ ಪ್ರವಾದಿಗಳು ತೀರ ಕಡಿಮೆ ಪ್ರಮಾಣದಲ್ಲಿ ಕಾಣಬಹುದು. ಅಲ್ಲದೇ ಸತ್ಯವೇನೆಂದರೆ ಅವನು ಪವಾಡಗಲ್ಲಿ ಒಂದು ಸರೋವರವೇ ಹರಿಸಿಬಿಟ್ಟಿದ್ದಾನೆ. ನಮ್ಮ ನಬಿ(ಸ) ರವರನ್ನು ಹೊರತುಪಡಿಸಿ ಬಾಕಿ ಎಲ್ಲ ಪ್ರವಾದಿಗಳಲ್ಲೂ ಇಂತಹ ಸಾಕ್ಷ್ಯಸಹಿತ ಪುರಾವೆಗಳು ತನ್ನ ನ್ಯಾಯಪೂರ್ತಿಕರಣಕ್ಕಾಗಿ ಪ್ರಸ್ತುತಪಡಿಸದ್ದು ತುಂಬಾ ವಿರಳ. ಇದೀಗ ಯಾರು ಸ್ವೀಕರಿಸುತ್ತಾರೂ ಅವರು ಸ್ವೀಕರಿಸಲಿ. (ತತಿಮ್ಮ ಹಖೀಖತುಲ್ ವಹೀ, ರೂಹಾನಿ ಖಝಾಇನ್, ಸಂಪುಟ–22, ಪುಟ–574)

**ಕ್ರೈಸ್ತರು ಶೀಘ್ರದಲ್ಲಿಯೇ ನಿಜವಾದ ದೇವನನ್ನು ಗುರುತಿಸುವರು.**

ಆ ದಿನಗಳು ಬರಲಿವೆ. ಕ್ರೈಸ್ತರ ಸಜ್ಜನ ಪುತ್ರರು ನಿಜವಾದ ದೇವನನ್ನು ಗುರುತಿಸುವರು, ಮತ್ತು ಪುರಾತನರು ಬಿಕ್ಕಳಿಸುತ್ತಾ ವಿರಹಿತ ಏಕದೇವನನ್ನು ಪಡೆಯುವರು. ಇದು ನಾನು ಹೇಳುತ್ತಿಲ್ಲ. ನನ್ನ ಒಳಗಿನ ಆತ್ಮ ಹೇಳುತ್ತಿದೆ. ಯಾರು ಎಷ್ಟರಮಟ್ಟಿಗೆ ಸತ್ಯದೊಡನೆ ಹೋರಾಡಬಲ್ಲರು. ಹೋರಾಡಲಿ, ಏನೆಲ್ಲ ತಂತ್ರಗಳನ್ನು ಮಾಡಬಲ್ಲರೋ ಮಾಡಲಿ, ನಿಸ್ಸಂಶಯವಾಗಿ ಮಾಡಲಿ. ಆದರೆ ಅಂತಿಮವಾಗಿ ಅದು ಆಗಿಯೇ ತೀರುವುದು. ಈ ಭೂಮ್ಯಾಕಾಶಗಳು ಪಲ್ಲಟಗೊಳ್ಳುವುದು ಸರಳವಿದೆ. ಪರ್ವತಗಳು ತನ್ನ ಸ್ಥಾನ ಬಿಟ್ಟು ಬಿಡುವುದು ಸರಳವಿದೆ. ಆದರೆ ಈ ವಾಗ್ದಾನಗಳು ಬದಲಾಗಲಾರರು. (ಸಿರಾಜೆ ಮುನೀರ್, ರೂಹಾನಿ ಖಝಾಇನ್, ಸಂಪುಟ–12, ಪುಟ–66)

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಸಮ್ಮುಖದಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

***126 ನೇ ಜಲ್ಸಾ ಸಾಲಾನ ಖಾದಿಯಾನ್***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಂದನೆಯದ್ದೇನೆಂದರೆ ನನ್ನನ್ನು ಎಲ್ಲಾ ಸಮುದಾಯಗಳಿಗೆ ತಾರತಮ್ಯವಿಲ್ಲದೆ ಕಳುಹಿಸಿಕೊಡಲಾಗಿದೆ, ನನಗಿಂತ ಹಿಂದೆ ಕೇವಲ ತಮ್ಮ ಸಮುದಾಯಕ್ಕಾಗಿ ಮಾತ್ರ ಕಳುಹಿಸಲಾಗುತಿತ್ತು. (ಮುಂದೆ ನಾಲ್ಕು ವಿಶಿಷ್ಠತೆಗಳನ್ನು ವಿವರಿಸಲಾಗಿದೆ. ಇದು ಸಹ ನೆನಪಿರಲಿ. ಆ ರಾತ್ರಿ ಐದು ವಿಶಿಷ್ಠತೆಗಳನ್ನು ಸೇರಿಸಿ ಅವರಿಗೆ ತಿಳಿಸಲಾಗಿತ್ತು. ಇಲ್ಲದಿದ್ದರೆ ಕೆಲ ವಿಶೇಷತೆಗಳನ್ನು ಉದಾಹರಣೆಗಾಗಿ ಮೇಲೆ ವಿವರಿಸಲಾಗಿದೆ. ಅದು ಇಸ್ಲಾಮಿನ ಪ್ರಾರಂಭ ಕಾಲದಿಂದಲೇ ಅವರಿಗೆ ನೀಡಲಾಗಿತ್ತು. ಈ ಹದೀಸಿನ ಅನ್ವಯ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದವರು ಯಾವುದೋ ಬೇರೆ ಸೃಷ್ಟಿಯಾಗಿತ್ತು ಎಂದು ಯಾರಿಗೆ ಹೇಳಲು ಸಾಧ್ಯ. ಏಕೆಂದರೆ ಅವರು ಹಝ್ರತ್ ಮುಸಾ(ಅ) ರವರ ಸತ್ಯವಿಶ್ವಾಸಿಗಳಾಗಿದ್ದರು. ಅವರು ಬನೀ ಈಸ್ರಾಯಿಲ್ ಆಗಿರಲಿಲ್ಲವಾಗಿದ್ದರೆ, ಅವರು ಮೂಸಾ(ಅ) ರವರ ಮೇಲೆ ಏಕೆ ಹಾಗೂ ಹೇಗೆ ವಿಶ್ವಾಸ ತರಲು ಸಾಧ್ಯವಿತ್ತು? ಎಂದು ಪವಿತ್ರ ಖುರ್‌ಆನ್ ಸ್ಪಷ್ಟಗೊಳಿಸುತ್ತದೆ. ಆಕ್ಷೇಪವೇನಾದರೂ ಇದ್ದರೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. "ಕಮಾ ಅರ್‌ಸಲ್‌ನಾ ಇಲಾ ಫಿರ್‌ಔನ ರಸೂಲ (ಮುಝಮ್ಮಿಲ್-1) ಮೂಸಾ ಫಿರ್‌ಔನ್ ಸಮುದಾಯದೆಡೆ ಕಳುಹಿಸಲ್ಪಟ್ಟಿದ್ದರು. ಅದಾಗ್ಯೂ ಫಿರ್‌ಜಾನ್ ಬನಿ ಈಸ್ರಾಯಿಲ್‌ನಿಂದ ಆಗಿರಲಿಲ್ಲ. ಆಗ ಅದರ ಉತ್ತರವೇನೆಂದರೆ ಸಮುದಾಯದ ತಾತ್ಪರ್ಯ ಒಮ್ಮೆ ಕೌಟುಂಬಿಕ ಸಮುದಾಯವಾಗಿರುತ್ತದೆ. ಮತ್ತೊಮ್ಮೆ ದೇಶಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಉದಾಹರಣೆಗೆ ಭಾರತದಲ್ಲಿ ವಿವಿಧ ಸಮುದಾಯಗಳು ವಾಸಿಸುತ್ತಿದ್ದವು. ಅವರಲ್ಲಿ ಪ್ರವಾದಿಗಳು ಬರುತ್ತಿದ್ದರು. ಅವರು ಭಾರತ ಸಮುದಾಯದೆಡೆ ಬರುತ್ತಿದ್ದರು. ಅಲ್ಲದೇ ಬ್ರಾಹ್ಮಣ ಅಥವಾ ರಜಪೂತ ಕಡೆ ಬಂದಿದ್ದರು ಎನ್ನಲಾಗದು. ಏಕೆಂದರೆ ಒಂದು ಸ್ಥಳದಲ್ಲಿರುವರನ್ನು ಸವಲತ್ತುಗಳ ನಿಮಿತ್ತ ಒಂದು ಸಮುದಾಯ ಎಂದು ಪರಿಗಣಿಸಲಾಗುತ್ತದೆ. ಅಂದಹಾಗೆ ಫಿರೋನಿನ ಮತ್ತು ಅವನ ಸಮುದಾಯದ ಜೊತೆ ಹಝ್ರತ್ ಮೂಸಾ ಆಲೈಸ್ಸಲಾಮ್, ಸರಕಾರ, ರಾಜಕೀಯ, ಕಾನೂನು ಹಾಗೂ ಸಂಸ್ಕೃತಿಯ ಮೂಲಕ ಸಂಬಂಧಿಸಿದ್ದರು. ಹಾಗಾಗಿ ಅವರನ್ನು ಒಂದು ಸಮುದಾಯ ಎಂದು ಪರಿಗಣಿಸಲಾಯಿತು. ಆದರೆ ಜಿನ್ನುಗಳಿಗೆ ಹಝ್ರತ್ ಮೂಸ ಅಲೆಸ್ಸಲಾಂರವರೊಂದಿಗೆ ಯಾವ ಸಂಬಂಧವಿತ್ತು? ಸರಕಾರದ ಅಥವಾ ರಾಜಕೀಯ ನೆಲೆಯಿಂದ ಅಥವಾ ಕಾನೂನಿನ ನೆಲೆಯಿಂದ ಮತ್ತು ಸಂಸ್ಕೃತಿಯ ನೆಲೆಯಿಂದ ಅವರಿಗೂ ಸಹ ಮೂಸ ಅಲೆಸ್ಸಲಾಂರವರ ಮೇಲೆ ವಿಶ್ವಾಸ ತರಲು ಆಜ್ಞೆ ನೀಡಲಾಯಿತು. ಹಝ್ರತ್ ಮೂಸ ಅಲೆಸ್ಸಲಾಂ ಬನಿ ಇಸ್ರಾಈಲ್ ಅಥವಾ ಅವರ ಜೊತೆಯಲ್ಲಿರುವ ಸಮುದಾಯದ ಕಡೆಯೇ ಆಗಮಿಸಿದ್ದರು. ಆದರೆ ಜಿನ್ನುಗಳು ತಮ್ಮದೇ ರೀತಿಯಲ್ಲಿ ಅವರ ಮೇಲೆ ವಿಶ್ವಾಸ ತಂದಿದ್ದರು. ಅಂದರೆ ಇದು ಸಹ ಸರಿಯಲ್ಲ. ಹಝ್ರತ್ ಮಸೀಹಿಸ್ಸಲಾಂ ರವರ ಒಂದು ಘಟನೆ ಇಂಜೀಲಿನಲ್ಲಿ ವಿವರಿಸಲಾಗಿದೆ. ಅದರಿಂದ ತಿಳಿದುಬರುತ್ತದೆ. ಅವರು ಇತರ ಸಮುದಾಯಗಳಿಗೆ ತನ್ನ ಜಮಾತಿನಲ್ಲಿ ಸಹ ಸೇರಲು ಅನುಮತಿ ನೀಡಲಿಲ್ಲ. ಅಲ್ಲದೇ ಒಬ್ಬ ಇತರ ಸಮುದಾಯದವರನ್ನು ಉಪದೇಶ ನೀಡಲು ಹೇಳಿದರೆ ಅವರು ಹೇಳಿದರು. "ಹುಡುಗರಿಂದ ರೊಟ್ಟಿ ತೆಗೆದು ನಾಯಿಗೆ ಹಾಕುವುದು ಒಳ್ಳೆಯದಲ್ಲ." (ಮತ್ತಿ, ಅಧ್ಯಾಯ-6, ವಚನ-26) ಅಂದಹಾಗೆ ಅವರು ಸ್ವಯಂ ತಮ್ಮ ಮರ್ಜಿಯಿಂದ ವಿಶ್ವಾಸ ತಂದಿದ್ದರು ಎಂಬುದೂ ಸಹ ಸರಿಯಲ್ಲ. ಏಕೆಂದರೆ ಜಿನ್ನುಗಳು ಒಂದು ನಿರ್ಧರಿತ ಸಮುದಾಯವಾದ ಕಾರಣ ಅವರಿಗೆ ಕೇವಲ ಆ ಪ್ರವಾದಿಯ ಮೇಲೆ ವಿಶ್ವಾಸ ತರಲು ಕಡ್ಡಾಯವಾಗಿದೆ. ಅವರು "ಮಿನ್ ಅಲ್‌ಫುಸಿ" ಹಿಮ್ ಅಡಿಯಲ್ಲಿ ಬಂದಿರಬೇಕು. ಮೂಸ ಅಲೆಸ್ಸಲಾಂರವರ ಮೇಲೆ ವಿಶ್ವಾಸ ತರುವುದು ಅವರಿಗೆ ಅನಿವಾರ್ಯ ಇರಲಿಲ್ಲ. ಆದುದರಿಂದ ಪವಿತ್ರ ಖುರ್‌ಆನ್‌ನ ವಚನಗಳು ಮತ್ತು ವಿವರಿಸಿದ ಹದೀಸುಗಳ ಪ್ರಕಾರ ಕನಿಷ್ಠ ಮೊದಲ ರಸೂಲುಲ್ಲಾ ಸಲ್ಲಲ್ಲಾಹು ಆಲೈಹಿವ ಸಲ್ಲಂರವರಿಗಿಂತ ಮೊದಲಾದರೂ ಜಿನ್ನುಗಳಿಗೆ ಒಂದು ಪ್ರತ್ಯೇಕ ಪ್ರವಾದಿ ಆಗಮಿಸುವುದು ಅನಿವಾರ್ಯವಿತ್ತು. ಅವರು ಅದೇ ಸಮುದಾಯದವರು ಆಗಬೇಕಿತ್ತು. ಜಿನ್ನುಗಳ ವಿವಿಧ ಸಮುದಾಯದ ಕಡೆಗೆ ಪ್ರತ್ಯೇಕ ಪ್ರತ್ಯೇಕ ಪಾದ್ರಿಗಳು ಆಗಮಿಸುವುದು ಅನಿವಾರ್ಯವಾಗಿತ್ತು.

ಏಳನೆಯ ಸಾಕ್ಷ್ಯ ಜಿನ್ನುಗಳು ಮನುಷ್ಯರಾಗಿದ್ದರು ಎಂಬುದಕ್ಕೆ ರಸೂಲುಲ್ಲಾಹ್(ಸ) ರವರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದನು. ಯಾಅಯ್ಯುಹನ್ನಾಸು (ಏರಾಫ್-206) ಇಲ್ಲಿ ಜಿನ್‌ಗಳನ್ನು ಪ್ರವಾದಿತ್ವದಲ್ಲಿ ಸೇರಿಸಲಿಲ್ಲ. ಜಿನ್ನುಗಳು ಸಹ ಪ್ರತ್ಯೇಕ ಸಮುದಾಯವಾಗಿರುತ್ತಿದ್ದರೆ, ಅವರಿಗೂ ಸಹ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತರುವುದು ಅನಿವಾರ್ಯವಾಗುತ್ತಿದ್ದರೆ ಅಥವಾ ಧರ್ಮಸಮ್ಮತ (ಜಾಂಯರ್‌ರುಝ್) ಆಗಿದ್ದರೆ ಹೀಗೆ ನುಡಿಯುಬಹುದಾಗಿತ್ತು. "ಯಾಅಯ್ಯುಹನ್ನಾಸು ಏಲ್ ಜಿನ್ನ್ ಇನ್ನಿ ರಸೂಲುಲಾಹಿ ಇಲೈಕುಂ ಜಯೀಆ" ಆದರೆ ಇದು ಪವಿತ್ರ ಖುರ್‌ಆನ್‌ನಲ್ಲಿ ಎಲ್ಲೂ ಇಲ್ಲ. ಆದುದರಿಂದ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದ ಜಿನ್ನುಗಳು ಖುರ್‌ಆನ್‌ನ ವ್ಯಾಖ್ಯಾನದನ್ವಯ ಮನುಷ್ಯರೇ ಆಗಿದ್ದರು ಮತ್ತು ಅದೇ ಕಾರಣದಿಂದ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತರಲು ಬಾಧ್ಯಸ್ಥರಾಗಿದ್ದರು. ಮತ್ತೊಂದು ವಚನ ಸಹ ಈ ಪೈಕಿ ಸ್ಪಷ್ಟಪಡಿಸುತ್ತದೆ. ಅದು ಸುರಾ ಸಬಾದ ವಚನ- "ಎಮಾ ಅರ್‌ಸಲ್‌ನಾಕ ಇಲ್ಲಾ ಕಾಆಫ್ತಲ್ ಲಿನ್ನಾಸಿ" (ಸಬಾ-319ಇ) ರೌಫ್ಟ ಕಫ್ ನಿಂದ ಬಂದಿರುತ್ತದೆ. ಅದರ ನಿಜವಾದ ಅರ್ಥ "ಕ್ರೂಢಿಕರಿಸುವುದು ಮತ್ತು ತಡೆಯುವುದು ಎಂದಾಗುತ್ತದೆ. ಅಂದಹಾಗೆ ಇದರೆ ತಾತ್ಪರ್ಯವೇನಾಯಿತೆಂದರೆ ಓ ಮುಹಮ್ಮದ್(ಸ) ನಾವು ನಿನಗೆ ಕೇವಲ ಮನುಷ್ಯರನ್ನು ಒಟ್ಟುಗೂಡಿಸಲು ಮತ್ತು ಯಾವ ಮನುಷ್ಯನನ್ನು ಸಹ ನಿನ್ನ ಪ್ರಚಾರದಿಂದ ವಂಚಿತನಾಗದಂತೆ ಅವರ ಬಳಿ ಕಳುಹಿಸಿದ್ದೇವೆ. ಈಗ ನೋಡಿ ಅಲ್ಲಾಹನಂತು ನಿನಗೆ ಕೇವಲ ಮನುಷ್ಯರನ್ನು ಒಟ್ಟುಗೂಡಿಸಲು ಕಳುಹಿಸಿದ್ದೇನೆ ಎನ್ನುತ್ತಾನೆ. ಕೆಲ ಜನರು ಭಾವಿಸುತ್ತಾರೆ. ಮನುಷ್ಯರ ಹೊರತು ಇನ್ನೂ ಕೆಲವು ಸೃಷ್ಟಿಗಳಿವೆ. ಅವು ಸಹ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತರಲು ಬಾಧ್ಯಸ್ಥರಾಗಿದ್ದಾರೆ. ವಾಸ್ತವವೇನೆಂದರೆ ಯಾವ ರೀತಿ ಮನುಷ್ಯರಲ್ಲಿ ಯಾರೂ ಸಹ ರಸೂಲುಲ್ಲಾಹ್(ಸ) ರವರ ಕರೆಯಿಂದ ಹೊರತಾಗಿಲ್ಲ. ಮನುಷ್ಯರ ಹೊರತಾಗಿ ಯಾವ ಸೃಷ್ಟಿಯೂ ಅವರ ಮೇಲೆ ವಿಶ್ವಾಸ ತರಲು ಸಹ ಬಾಧ್ಯರಸ್ಥಲ್ಲ. ಅದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಜಿನ್ನುಗಳು ಮನುಷ್ಯರೇ ಆಗಿದ್ದಾರೆಯೇ ಹೊರತು ಯಾವ ಬೇರೆ ಸೃಷ್ಟಿಯೂ ಅಲ್ಲ. (ತಫ್ಸೀರ್ ಕಬೀರ್, ಸಂಪುಟ-4, ಪುಟ-68 ಮುದ್ರಣ ಖಾದಿಯಾನ್ 2010)

---

*(ಪುಟ ಸಂಖ್ಯೆ 12ರ ಉಳಿದ ಭಾಗ)*

* ಅತಿಥಿಯೋರ್ವರು ಪ್ರಶ್ನೆ ಕೇಳಿದರು. ಲೋಕದಲ್ಲಿ ಬಂದ ಧರ್ಮಗಳೆಲ್ಲ ಸ್ವರ್ಗ ನರಕಗಳ ಬಗ್ಗೆ ಶಿಕ್ಷಣ ನೀಡುತ್ತವೆ. ಅವರಲ್ಲಿ ಕೆಲವರು ಇಂತಹವರು ಇದ್ದಾರೆ. ಅವರು ಒಬ್ಬರಿನ್ನೊಬ್ಬರಿಗೆ ಹತ್ಯೆಯನ್ನು ಮಾಡುತ್ತಾರೆ, ಮತ್ತೊಬ್ಬರ ಕುತ್ತಿಗೆಗಳನ್ನು ಕೊಯ್ಯುತ್ತಾರೆ. ಹುಝೂರ್(ಅತಬಿಅ) ನುಡಿದರು. ಯಾವ ಧರ್ಮವು ಹತ್ಯೆ ಮಾಡುವ ಶಿಕ್ಷಣ ನೀಡಲಿಲ್ಲ. ಅಲ್ಲಾಹನು ಹೇಳಿದ್ದು ಅದೇ ಆಗಿದೆ. ಒಳ್ಳೆಯ ಕಾರ್ಯಗಳನ್ನು ಮಾಡಿರಿ, ಪ್ರತಿಫಲ ದೊರೆಯುವುದು, ಕೆಟ್ಟದ್ದನ್ನು ಮಾಡಿದರೆ ಶಿಕ್ಷೆ ದೊರೆಯುವುದು, ಪವಿತ್ರ ಖುರ್‌ಆನ್ "ಜನ್ನತಾನ್" ಎಂದು ಹೇಳಿದೆ. ಅಂದರೆ ಸತ್ಕರ್ಮ ಮಾಡುವವರಿಗೆ ಇಹಲೋಕದಲ್ಲಿ ಸ್ವರ್ಗವಿದೆ. ಪರಲೋಕದಲ್ಲೂ ಸ್ವರ್ಗವಿದೆ. ಇನ್ನು ಯಾವ ಜನರು ಹತ್ಯೆಯ ಶಿಕ್ಷಣ ನೀಡುವರು, ಮತ್ತೊಬ್ಬರ ಕುತ್ತಿಗೆ ಕೊಯ್ಯುವವರು, ಅವರು ಶೈತಾನನ ಕಾರ್ಯ ಮಾಡುತ್ತಿದ್ದಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನ ಆರಂಭದಲ್ಲಿಯೇ ಅದರ ಸಾದೃಶ್ಯ ಭಾಷೆಯಲ್ಲಿ ಹೇಳಿರುವನು. ಸತ್ಕರ್ಮಗಳನ್ನು ಮಾಡಿದರೆ ಸ್ವರ್ಗ ದೊರೆಯುವುದು. ದುಷ್ಕರ್ಮಗಳನ್ನು ಮಾಡಿದರೆ ಗೊಂದಲ ನಿರ್ಮಿಸುವಿರಿ. ಅದರ ಶಿಕ್ಷೆ ದೊರೆಯುವುದು.

ಹುಝೂರ್(ಅತಬಿಅ) ನುಡಿದರು. ಜಮಾಅತ್ ಸತ್ಕರ್ಮಗಳಿಗಾಗಿ ಪ್ರಯತ್ನಪಡುತ್ತದೆ. ಜಮಾಅತ್ ಶಾಂತಿಯ ಶಿಕ್ಷಣ ನೀಡುತ್ತಿದೆ. ಅದು ನೀಡುತ್ತಿರುವ ಸಂದೇಶ ಅಲ್ಲಾಹನ ಸಂದೇಶವಾಗಿದೆ. ಜಮಾಅತ್ ಮಾನವೀಯತೆಯ ಮೌಲ್ಯಗಳನ್ನು ಸ್ಥಾಪಿಸುತ್ತಿದೆ. ಅಂದ ಹಾಗೆ ಜಮಾಅತಿನ ಸಂದೇಶದಂತೆ ನಡೆಯಿರಿ. ಸತ್ಕರ್ಮಗಳನ್ನು ಕೈಗೊಳ್ಳಿರಿ.

ಹುಝೂರ್(ಅತಬಿಅ) ನುಡಿದರು. ಧರ್ಮ ಒಂದು ವೇಳೆ ಗೊಂದಲ ನಿರ್ಮಿಸುತ್ತಿದೆ ಎಂದಾದರೆ ಜಮಾಅತಿಗೆ ಧರ್ಮ ಎಂದೂ ಗೊಂದಲ ಕಲಿಸಲಿಲ್ಲ. ಜಮಾಅತ್ ಹತ್ಯೆಯ ಶಿಕ್ಷಣ ನೀಡುವುದಿಲ್ಲ. ಬದಲು ಸತತವಾಗಿ ಶಾಂತಿಯ ಶಿಕ್ಷಣವೇ ನೀಡುತ್ತಿದೆ. ಯಾವ ರೀತಿ ದುಷ್ಕರ್ಮಗಳಿಗೆ ಲೌಕಿಕ ಕಾನೂನುಗಳು ಶಿಕ್ಷೆಯುನ್ನು ವಿಧಿಸುತ್ತವೆಯೋ ಅದೇ ರೀತಿ ದೇವನಿಯುಮವಾಗಿದೆ. ದುಷ್ಕರ್ಮಿಗಳಿಗೆ ಶಿಕ್ಷೆ ದೊರೆಯುವುದು.

* ಮಹಿಳೆಯೋರ್ವಳು ಹೇಳಿದರು. ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಎಲ್ಲಾ ಏರ್ಪಾಡುಗಳು ಅತ್ಯುತ್ತಮವು, ಉನ್ನತ ಮಟ್ಟದ್ದು ಆಗಿದ್ದವು. ನಾನು ಹುಝೂರ್(ಅತಬಿಅ)ರ ಎಲ್ಲಾ ಭಾಷಣಗಳನ್ನು ಆಲಿಸಿರುತ್ತೇನೆ. ನನ್ನ ಅಭಿಮತವಿದೆ. ಕಿರಿಯರು, ಹಿರಿಯರು ಎಲ್ಲರೂ ಈ ಭಾಷಣಗಳನ್ನು ಆಲಿಸಿದರೆ ಅವರ ಅತ್ಯುತ್ತಮ ತರಬೇತಿ ಆಗುವುದು. ನಾನು ನನ್ನ ಮಕ್ಕಳು, ಮೊಮ್ಮಕ್ಕಳಿಗೋಸ್ಕರ ದುಆ ಮಾಡಲು ಕೋರುತ್ತೇನೆ. ಬಲ್ಗೇರಿಯಾದಲ್ಲಿ ಯಾರಾದರೂ ಇದ್ದರೆ ಅವರಿಗೆ ತರಬೇತಿ ನೀಡಲಿ, ಸುಧಾರಿಸಲಿ. ಏಕೆಂದರೆ ಅವರು ವ್ಯರ್ಥ ಆಗಬಾರದು.

**(ಮುಂದುವರಿಯುವುದು)**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 09 December 2021, Issue No. 49

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 48ರ ವರದಿಯ ಉಳಿದ ಭಾಗ)**

ಇದು ಲೋಕದಲ್ಲಿ ಶಾಂತಿ ಸ್ಥಾಪನೆಯಲ್ಲಿ ನೆರವಾಗುವ ಮಾತಾಗಿದೆ. ಮತ್ತು ಆಕೆ ಪ್ರಶ್ನೆ ಕೇಳಿದಳು. ಪವಿತ್ರ ಖುರ್‌ಆನ್‌ನಲ್ಲಿದೆ. ಅಲ್ಲಾಹನ ಮಾರ್ಗದಲ್ಲಿ ಶಹೀದ್ ಆದವರು ಜೀವಂತವಾಗಿದ್ದಾರೆ. ಅಲ್ಲಾಹನು ಅವರಿಗೆ ಜೀವನಾಧಾರ ಒದಗಿಸುತ್ತಿದ್ದಾನೆ ಎಂಬ ಅರ್ಥವೇನು. ಈ ಪ್ರಶ್ನೆಯ ಉತ್ತರ ನೀಡುತ್ತಾ ಹುಝೂರ್(ಅತಬಿಅ) ನುಡಿದರು. ಪಾಕಿಸ್ತಾನದಲ್ಲಿ ನಮ್ಮ ಬಹಳಷ್ಟು ಅಹ್ಮದಿಯರನ್ನು ಶಹೀದ್ ಮಾಡಲಾಗಿದೆ. ಅಂದ ಹಾಗೆ ಅವರು ಧರ್ಮಕ್ಕಾಗಿ ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ. ಸತ್ಯದ ಮೇಲೆ ಸ್ಥಿರವಾಗಿದ್ದರು. ಸತ್ಯವನ್ನು ಅರಿತಿದ್ದರು. ತಮ್ಮ ಧರ್ಮಕ್ಕಾಗಿ ತಮ್ಮ ಮತಕ್ಕಾಗಿ ಪ್ರಾಣ ತ್ಯಾಗ ಮಾಡಿದವರನ್ನು ಅಲ್ಲಾಹನು ಎಂದೂ ವ್ಯರ್ಥಗೊಳಿಸಲಾರನು.

* ಹುಝೂರ್(ಅತಬಿಅ) ನುಡಿದರು. ಈ ಜೀವನ ತಾತ್ಕಾಲಿಕ. ನಿಜವಾದ ಜೀವನ ಪರಲೋಕದ ಜೀವನವಾಗಿದೆ. ಅದು ಮರಣದ ನಂತರ ನಮಗೆ ಲಭಿಸುವುದು. ಅಲ್ಲಿ ದೊರೆಯುವಂತಹ ಜೀವನಾಧಾರವು ಅಲ್ಲಾಹನ ಸಂತೃಪ್ತಿ ಪಡೆಯುವುದಾಗುವುದು. ಅವರ ಸ್ಥಾನ ಉನ್ನತಿಕರಿಸಲಾಗುವುದು. ಅದನ್ನು ನಾವು ಊಹಿಸಲು ಸಾಧ್ಯವಿಲ್ಲ. ಶಹೀದ್ ಆದವರ ಸಂತಾನ ಸಹ ಅದರ ಫಲ ಪಡೆಯುವವರು. ತುಂಬ ಪ್ರಗತಿ ಸಾಧಿಸುವರು.

ಶಹೀದರ ಕುರಿತು ಅಲ್ಲಾಹನು ನುಡಿದಿದ್ದು. ಅವರು ಜೀವಂತವಾಗಿರುವವರು ಅದರ ಅರ್ಥ ಅವರ ಕಾರ್ಯಗಳು ಅಜರಾಮರರಾಗಿರುವುದು. ಯಾವ ಧರ್ಮಕ್ಕಾಗಿ ಅವರು ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ. ಆ ಧರ್ಮವು ಜೀವಂತವಾಗುವುದು. ಮಹೋನ್ನತ ಪ್ರಗತಿ ಸಾಧಿಸುವುದು ಮತ್ತು ಅಸಾಮಾನ್ಯ ವಿಜಯ ಪ್ರಾಪ್ತವಾಗುವುದು. ಶಹೀದರ ಸಂತಾನ ಸಹ ಅದರ ಫಲ ಪಡೆಯುವರು.

* ಹುಝೂರ್(ಅತಬಿಅ) ಅನ್ವರ್ ನುಡಿದರು. ಯಮನಿನ ಸ್ಥಿತಿ ಚಿಂತಾಜನಕವಾಗಿದೆ. ಮುಸ್ಲಿಮರು ಒಬ್ಬರನನ್ನೊಬ್ಬರು ಹತ್ಯೆ ಮಾಡುತ್ತಿದ್ದಾರೆ. ಒಬ್ಬರು ಮೊತ್ತೊಬ್ಬರ ಕುತ್ತಿಗೆ ಕೊಯ್ಯುತ್ತಿದ್ದಾರೆ, ಅಲ್ಲಾಹನು ಅವರೊಡನೆ ಹೇಗೆ ವರ್ತಿಸುವನು? ಅಲ್ಲಾಹನೇ ಬಲ್ಲನು.

ಹೌದು. ಒಂದು ಸಮುದಯಾದ ಮೇಲೆ ಯುದ್ಧ ಹೇರಲ್ಪಟ್ಟರೆ ವಿವಶರಾಗಿ ತಮ್ಮ ರಕ್ಷಣೆಗೋಸ್ಕರ ತನ್ನ ಜೀವ ಉಳಿಸಿಕೊಳ್ಳಲು ಆಯುಧ ಎತ್ತಿಕೊಳ್ಳಬಹುದು. ತನ್ನ ರಕ್ಷಣೆ ಮಾಡಿಕೊಳ್ಳುವಾಗ ಹತರಾದರೆ ಅವನು ಶಹೀದ್ ಆಗುತ್ತಾನೆ.

ಈಗ ಯಮನಿನಲ್ಲಿ ಏನು ಯುದ್ಧ ನಡೆಯುತ್ತಿದೆ, ಶಿಯಾ, ಸುನ್ನಿ ಒಬ್ಬರು ಮತ್ತೊಬ್ಬರ ಕುತ್ತಿಗೆ ಕೊಯ್ಯುತ್ತಿದ್ದಾರೆ, ಸೀರಿಯಾದಲ್ಲಿ ಶಿಯಾ, ಸುನ್ನಿ, ಒಬ್ಬರು ಮತ್ತೊಬ್ಬರನ್ನು ಹತ್ಯೆ ಮಾಡುತ್ತಿದ್ದಾರೆ, ಒಬ್ಬರು ಇನ್ನೊಬ್ಬರ ಕುತ್ತಿಗೆ ಕೊಯ್ಯುತ್ತಿದ್ದಾರೆ, ಈ ತರಹದ ದೌರ್ಜನ್ಯದ ಅಧಿಕಾರ ಇಸ್ಲಾಮ್ ಎಂದೂ ನೀಡುವುದಿಲ್ಲ.

ಹುಝೂರ್(ಅತಬಿಅ) ನುಡಿದರು. ಆ ಕಾರಣಕ್ಕಾಗಿಯೇ ಹಝ್‌ರತ್ ಅಖ್‌ದಸ್ ಮಸೀಹೆ ಮೌಊದ್(ಅ) ರವರ ಆಗಮನವಾಗಿದೆ. ಅವರು ಎಲ್ಲಾ ಮುಸ್ಲಿಮರನ್ನು ಮತ್ತು ಪಂಥದವರನ್ನು ಒಂದು ಕೈಯ ಮೇಲೆ ಒಟ್ಟುಗೂಡಿಸಬೇಕಾಗಿತ್ತು. ಇದೀಗ ಮುಸ್ಲಿಮರ ಉಳಿವಿಕೆ ಮಸೀಹ್ ಮಹದಿಯರನ್ನು ನಂಬುವುದರಲ್ಲಿಯೇ ಇದೆ.

* ಪ್ರಶ್ನೆ ಕೇಳಲಾಯಿತು. ಶಹೀದರ ಜೀವಂತಿಕೆಯ ಕುರಿತಾದ ವಚನ ಹೀಗೆ ಅರ್ಥೈಸಲಾಗುತ್ತಿದೆ. ಹಝುರತ್ ಈಸಾ(ಅ) ಜೀವಂತವಾಗಿದ್ದಾರೆ ಮತ್ತು ಅವರಿಗೆ ಜೀವನಾಧಾರ ನೀಡಲಾಗುತ್ತಿದೆ ಆಗ ಹುಝೂರ್(ಅತಬಿಅ) ನುಡಿದರು. ಒಂದು ವೇಳೆ ಈಸಾ(ಅ) ಜೀವಂತವಾಗಿದ್ದಾರೆ ಎಂದರೆ ಎಲ್ಲಾ ಶಹೀದರು ಕೂಡ ಜೀವಂತವಾಗಿದ್ದಾರೆ. ಆದುದರಿಂದ ಈ ವಚನವನ್ನು ತಪ್ಪಾಗಿ ಅರ್ಥೈಸುವುದು ಬೇಡ. ಈಸಾ(ಅ) ಅವರ ವಫಾತ್ (ನಿಧನ) ನಿಮಿತ್ತ ಇರುವ ಇತರ ವಚನಗಳ ಮೇಲೆ ಯೋಚಿಸಿರಿ. ಅಲ್ಲಾಹನು ಮೊದಲು ವಫಾತಿನ ವಿಷಯ ಹೇಳಿರುವನು. ಮತ್ತೆ ಎತ್ತಲ್ಪಡುವ ವಿಷಯ. ಒಂದು ವೇಳೆ ಈಸಾ(ಅ) ಜೀವಂತವಾಗಿದ್ದರೆ ಅವರಿಗೆ ಜೀವನಾಧಾರ ನೀಡಲಾಗುತ್ತದೆ ಎಂದರೆ ಮತ್ತು ಅವರೇ ಮರಳಿ ಬರುವವರೆಂದರೆ ಅದೇ ವರ್ತನೆ ಇತರ ಶಹೀದರೊಡನೆ ಮಾಡಬೇಕಾಗುತ್ತದೆ. ಹೀಗಾದರೆ ಈಸಾ(ಅ) ರವರ ವಿಷೇಷತೆ ಎಲ್ಲಿ ಉಳಿಯಿತು.

* ಪ್ರಶ್ನೆ ಮಾಡಿರುವ ಮಿತ್ರರು ಹೇಳಿದರು. ಮೊದಲು ನಾನು ಅದೇ ವಿಶ್ವಾಸ ಹೊಂದಿದ್ದೆ. ಈಸಾ(ಅ) ಜೀವಂತವಾಗಿದ್ದಾರೆ ಎಂದು. ನಾನು ಹುಝೂರ್(ಅತಬಿಅ) ಭಾಷಣಗಳನ್ನು ಕೇಳಿದ ನಂತರ ಈಗ ನನಗೆ ಮನದಟ್ಟಾಗಿದೆ. ಹಝ್‌ರತ್ ಈಸಾ(ಅ) ವಫಾತ್ ಹೊಂದಿದ್ದಾರೆ ಎಂದು.

ಹುಝೂರ್(ಅತಬಿಅ) ನುಡಿದರು. ಜೀವಂತ ನಬಿ, ನಬಿ(ಸ) ರವರಾಗಿದ್ದಾರೆ, ಜೀವಂತ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ. ಮತ್ತು ಜೀವಂತ ಧರ್ಮ ಇಸ್ಲಾಮ್ ಧರ್ಮವಾಗಿದೆ, ಶರೀಅತ್ ಇಸ್ಲಾಮ್ ಆಗಿದೆ. ಒಂದು ವೇಳೆ ನಿಧನ ಹೊಂದಿದ ನಬಿಯೇ ಬರುವರು ಎಂದಾದರೆ, ಬನೀ ಈಸ್ರಾಯಿಲರ ನಬಿ ಬರಬೇಕಾಗಿದೆ ಎಂದು. ನಮ್ಮ ಅಭಿಮಾನ ಒಪ್ಪದು. ಬನೀ ಈಸ್ರಾಯಿಲರ ನಬಿ ನಮ್ಮ ಮಾರ್ಗದರ್ಶನಕ್ಕಾಗಿ ಬರುವರೆ. ಅಂದ ಹಾಗೆ ಯಾವ ನಿಧನ ಹೊಂದಿದ ಪ್ರವಾದಿಯರು ಬರಲು ಸಾಧ್ಯ?

ಹಝ್‌ರತ್ ರಸೂಲುಲ್ಲಾಹ್(ಸ) ರವರ ಸಮುದಾಯದಿಂದಲೇ, ಅವರ ಭವಿಷ್ಯವಾಣಿಗಳಿಗೆ ಅನುಗುಣವಾಗಿ ಯಾವ ಮಸೀಹ್ ಮಹದಿ ಹಝುರತ್ ಈಸಾ(ಅ) ರ ಸಾದೃಶ್ಯ ರೂಪದಲ್ಲಿ ಬರಬೇಕಾಗಿತ್ತು. ಅವರು ಬಂದಿರುವರು. ಇಂದು ಲೋಕದ ಮುಕ್ತಿ ಮತ್ತು ಲೋಕದ ಶಾಂತಿ ಅವರಿಂದಲೇ ಸಂಬಂಧಿಸಿದೆ.

* ಅತಿಥಿಯೋರ್ವರು ಹೇಳಿದರು ನಾನು ಕ್ರೈಸ್ತನಾಗಿದ್ದೇನೆ. ಜಲ್ಸದ ವ್ಯವಸ್ಥೆ ಬಹಳ ಉತ್ತಮವಾಗಿತ್ತು. ಎಲ್ಲ ರೀತಿಯಿಂದ ನಮ್ಮ ಬಗ್ಗೆ ಕಾಳಜಿವಹಿಸಿದ್ದಾರೆ.

ನನ್ನ ಪ್ರಶ್ನೆ ಎಂದರೆ ಇಡೀ ಲೋಕದ ಸೃಷ್ಟಿಕರ್ತ ಒಬ್ಬನೇ ಆಗಿದ್ದು ಒಂದು ವೇಳೆ ಆಕಾಶದಿಂದ ಮತ್ತೊಬ್ಬರು ಬಂದರೆ ಗೊಂದಲ ಉಂಟಾಗುವುದಿಲ್ಲವೇ.

ಆಗ ಹುಝೂರ್ ಹೇಳಿದರು. ಕ್ರೈಸ್ತರು ತಂದೆ ಮಗ ಎನ್ನುತ್ತಾರೆ. ಕೆಲ ಸಂದರ್ಭಗಳಲ್ಲಿ ಪುತ್ರನು ಗೊಂದಲ ನಿರ್ಮಿಸುವನು. ಎರಡೆರಡು ದೇವರುಗಳಿದ್ದರೆ ಲೋಕದಲ್ಲಿ ಗೊಂದಲ ಉಂಟಾಗುವುದು. ಅವನು ಆಕಾಶದಿಂದ ಭಾರದಿದ್ದರೂ ಆಕಾಶದಲ್ಲಿಯೇ ಕುಳಿತುಕೊಂಡಿದ್ದರೂ ಅಲ್ಲಿಂದಲೇ ತನ್ನ ಆದೇಶ ಹೊರಡಿಸುವನು. ಆಗಲೂ ಲೋಕದಲ್ಲಿ ಗೊಂದಲ ಉಂಟಾಗುವುದು.

ಹಝ್‌ರತ್ ಈಸಾ(ಅ) ಬನೀ ಈಸ್ರಾಯೀಲರ ನಬಿ ಆಗಿದ್ದರು. ಬನೀ ಈಸ್ರಾಯಿಲರ ಉದ್ಧಾರಕ್ಕಾಗಿ ಆಗಮಿಸಿದ್ದರು. ತಮ್ಮ ಕಾರ್ಯ ಮುಗಿಸಿಕೊಂಡು ಇಹಲೋಕ ತ್ಯಜಿಸಿದರು.

ಹಝುರತ್ ರಸೂಲುಲ್ಲಾಹ್(ಸ) ಆಗಮಿಸಿದರು. ಮತ್ತೆ ಅವರ ಭವಿಷ್ಯವಾಣಿಗಳ ನಿಮಿತ್ತ ಅಂತಿಮ ಕಾಲಘಟ್ಟದಲ್ಲಿ ಅವರ ಅನುಸರಣೆಯಲ್ಲಿ ಹಝುರತ್ ಅಖದಸ್ ಮಸೀಹ್ ಮೌಊದ್(ಅ) ಆಗಮಿಸಿದರು ಅಹ್ಮದಿಯಾ ಜಮಾಅತ್ ಅವರನ್ನು ನಂಬುತ್ತದೆ ಮತ್ತು ಈಗ ಈ ಜಮಾಅತ್ ಅವರ ಶಿಕ್ಷಣದ ಮೇಲೆ ಕಾರ್ಯನಿರತವಾಗಿದೆ.

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE : 1800–103–2131**
ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ
(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.